ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಮಾರ್ಚ್ - 2005

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ – 20 ಸಂಚಿಕೆ : 3

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.

ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಸಮಪಾಲು ಪಡೆದ ಮಹಿಳೆಯರು

ಕನ್ನಡದಲ್ಲಿ ಹಲವಾರು ಪ್ರಥಮಗಳನ್ನು ದಾಖಲಿಸಿರುವ ಶ್ರೀಮತಿ ಗೀತಾ ನಾಗಭೂಷಣ ಈಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿ, ಅದರಲ್ಲೂ ಮೊದಲ ಮಹಿಳೆಯೆನಿಸಿಕೊಂಡಿದ್ದಾರೆ. ಅವರಿಗೆ ಅಚಲದ ಅಭಿನಂದನೆಗಳು.

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಪ್ರಾತಿನಿಧ್ಯ ಸಿಗದಿದ್ದರೂ ನಮ್ಮ ಕರ್ನಾಟಕ ಸರ್ಕಾರ ಸಾಹಿತ್ಯ ಅಕಾಡಿಮಿಯ ಮಟ್ಟಿಗೆ ಶೇಖಡ 50 ರಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿದೆ. ಹತ್ತು ಜನ ಸದಸ್ಯರಿರುವ ಸಾಹಿತ್ಯ ಅಕಾಡೆಮಿಯಲ್ಲಿ ಐವರು ಮಹಿಳೆಯರು, ವೈದೇಹಿ, ಸಬೀಹಾ, ಮಲ್ಲಿಕಾ ಘಂಟಿ, ಮುಕ್ತಾಯಕ್ಕ ಮತ್ತು ಲತಾ ರಾಜಶೇಖರ್ ರವರಿಗೆ ಅಚಲದ ಅಭಿನಂದನೆಗಳು.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಶಿಕ್ಷಣದಿಂದ ಅಧ್ಯಯನದವರೆಗೆ

ಸುಮಾರು ನೂರೈವತ್ತು ವರ್ಷಗಳ ಇತಿಹಾಸವಿರುವ ಭಾರತದ ಮಹಿಳಾ ಶಿಕ್ಷಣ ಚರಿತ್ರೆಯತ್ತ ಒಮ್ಮೆ ಹಿನ್ನೋಟ ಹರಿಸಿದಾಗ ಅದು ನಡೆದು ಬಂದ ಹಾದಿ, ಪಡೆದುಕೊಂಡ ಸ್ವರೂಪ ಇಂದು ಅಚ್ಚರಿ ಹುಟ್ಟಿಸುತ್ತದೆ. ಸಾಂಪ್ರದಾಯಿಕ ವಿದ್ಯಾಭ್ಯಾಸ ಕ್ರಮಕ್ಕೆ ಮಹಿಳೆಯರು ಪ್ರವೇಶಿಸಿದ ರೀತಿಯೇ ಒಂದು ಚಳುವಳಿಯ ಸ್ವರೂಪವನ್ನು ಹುಟ್ಟಿ ಹಾಕಿತು. 'ಮಹಿಳಾ ಶಿಕ್ಷಣದಿಂದ ಪುರುಷರಿಗೇ ಹೆಚ್ಚು ಪ್ರಯೋಜನವಾಗುತ್ತದೆ', 'ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ಪುರುಷರಿಗೆ ಒಳ್ಳೆಯ ಜೀವನ ಸಂಗಾತಿಗಳಾಗಬಹುದು', ಎಂಬಂತಹ ಆಲೋಚನೆಗಳಿಂದಲೇ ಆರಂಭದಲ್ಲಿ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಿದ್ದರೂ ಇದಕ್ಕೆ ಭಿನ್ನವಾದ ಚಿಂತನೆಯನ್ನು ಹೊಂದಿದ್ದ ಸಮಾಜಸುಧಾರಕರೂ ಇದ್ದರು. ಜ್ಯೋತಿಬಾಪುಲೆ, ವಿದ್ಯಾಸಾಗರ, ಕರ್ವೆ, ಸಾವಿತ್ರಿಬಾಯಿ ಫುಲೆ ಮತ್ತು ಪಂಡಿತಾ ರಮಾಬಾಯಿ ಮುಂತಾದವರು 'ಮಹಿಳಾ ಶಿಕ್ಷಣ'ವು ಮಹಿಳೆಯರಿಗೆ ಸಿಕ್ಕಲೇಬೇಕಾದ ಸಾಮಾಜಿಕ ನ್ಯಾಯವೆಂದು ಬಗೆದರು. 'ಶಿಕ್ಷಣವೊಂದೇ ಅಜ್ಞಾನ ಮತ್ತು ಅಮಾನವೀಯ ವರ್ತನೆಯನ್ನು ತೊಡೆದು ಹಾಕಿ ಮನುಷ್ಯತ್ವವನ್ನು ಹುಟ್ಟಿ ಹಾಕಬಲ್ಲುದು' ಎಂಬುದು ಸಾವಿತ್ರಿಬಾಯಿಯವರ ದೃಢವಾದ ನಂಬಿಕೆಯಾಗಿತ್ತು. 1927ರಲ್ಲಿ ಆರಂಭವಾದ ಅಖಿಲ ಭಾರತ ಮಹಿಳಾ ಕಾನ್ಫರೆನ್ಸ್ ತನ್ನ ಪ್ರತಿ ಸಮ್ಮೇಳನದಲ್ಲೂ 'ಮಹಿಳಾ ಶಿಕ್ಷಣ'ವನ್ನು ಕುರಿತಂತೆ ಬೇಡಿಕೆಯನ್ನು ಮಂಡಿಸುತ್ತಿತ್ತು. ಮಹಿಳೆಯರಿಗೆ ಪ್ರತ್ಯೇಕ ಶಾಲೆ ಮತ್ತು ಕಾಲೇಜುಗಳ ಬೇಡಿಕೆಯೊಂದಿಗೆ ಆರಂಭವಾದ ಮಹಿಳಾ ಚಳುವಳಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾದ ಶಿಕ್ಷಣ ಪಠ್ಯವಿರಬೇಕೆಂಬ ಬೇಡಿಕೆಯನ್ನು ಕೈಗೆತ್ತಿಕೊಂಡಿತು.

ದೇಶ ಸ್ವಾತಂತ್ರ ಗಳಿಸಿದ ಮೇಲೆ ಸಂವಿಧಾನದತ್ತವಾಗಿಯೂ ಮಹಿಳಾ ಶಿಕ್ಷಣದತ್ತ ಗಮನ ಹರಿಸಲಾಯಿತು. 1950ರಲ್ಲಿ ಮಂಡಿಸಲಾದ ಭಾರತದ ಸಂವಿಧಾನದಲ್ಲಿ ಮಹಿಳಾ ಕಲ್ಯಾಣವನ್ನು ಕುರಿತಂತೆ ಹಲವಾರು ಅವಕಾಶಗಳನ್ನು ಕಲ್ಪಿಸಿಕೊಡಲಾಯಿತು. ಇಂದು ಮಹಿಳಾ ಶಿಕ್ಷಣದಿಂದ ಮಹಿಳಾ ಅಧ್ಯಯನದತ್ತ ಎಲ್ಲರ ಗಮನ ಹರಿದಿದೆ. ಮಹಿಳಾ ಅಧ್ಯಯನಕ್ಕೆ ಇಂದು ನೀಡುತ್ತಿರುವ ಪ್ರಾಶಸ್ತ್ಯವೂ ಕೂಡ ಮಹಿಳಾ ಚಳುವಳಿಯ ಕೊಡುಗೆಯೆಂಬುದನ್ನು ಮರೆಯಲಾಗುವುದಿಲ್ಲ. 1981ರಲ್ಲಿ ಮುಂಬೈನ ಎಸ್.ಎನ್.ಡಿ.ಟಿ. ವಿಶ್ವವಿದ್ಯಾಲಯದಲ್ಲಿ ನಡೆದ ಮಹಿಳಾ ಅಧ್ಯಯನವನ್ನು ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ನಡೆದ ಚರ್ಚೆಗಳು, ರೂಪುಗೊಂಡ ಸಲಹಾ ಸಮಿತಿಯ ಪರಿಣಾಮವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಮಹಿಳಾ ಅಧ್ಯಯನದ ಕೇಂದ್ರಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದರತ್ತ ವಿಶೇಷ ಗಮನ ಹರಿಸಿದವು. 1986ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ವಿಶ್ವವಿದ್ಯಾಲಯಗಳಿಗೆ ನೀಡಿದ ಮಾರ್ಗದರ್ಶಿ ಸೂತ್ರಗಳು ಮತ್ತು ಧನಸಹಾಯದಿಂದಾಗಿ ರಾಷ್ಟ್ರದ ಹಲವೆಡೆ ಮಹಿಳಾ ಅಧ್ಯಯನ ಕೇಂದ್ರಗಳು ಆರಂಭವಾದವು. ಹೀಗಾಗಿ ಮಹಿಳಾ ಅಧ್ಯಯನವನ್ನು ವಿಶಾಲವಾದ ವೇದಿಕೆಯಲ್ಲಿ ಕಾನೂನುಬದ್ಧಗೊಳಿಸುವ ಪ್ರಯತ್ನವಾದದ್ದು ಒಂದು ಸ್ವಾಗತಾರ್ಹ ಬೆಳವಣಿಗೆಯೇ.

ಮಹಿಳಾ ಅಧ್ಯಯನವನ್ನು ಕೇವಲ ಅಕೆಡೆಮಿಕ್ ಶಿಸ್ತಾಗಿ ಮಾತ್ರ ನೋಡುವುದು ಸರಿಯಾಗದು. ದಮನಿತರ ವಿಮೋಚನೆ, ನ್ಯಾಯಕ್ಕಾಗಿನ ಹೋರಾಟ, ಹಕ್ಕುಗಳ ಸಮರ್ಥನೆಯ ಫಲವಾಗಿ ಮೂಡಿಬಂದ ಜ್ಞಾನಶಿಸ್ತುಎಂದು ಮಹಿಳಾ ಅಧ್ಯಯನವನ್ನು ವ್ಯಾಖ್ಯಾನಿಸುವುದು ಹೆಚ್ಚು ಸೂಕ್ತ. ಕ್ರಿಯೆ ಮತ್ತು ಜ್ಞಾನ, ಸಿದ್ಧಾಂತ ಮತ್ತು ಆಚರಣೆ, ಲಿಪಿ ಮತ್ತು ಧ್ವನಿ - ಇವೆಲ್ಲವನ್ನೂ ಒಳಗೊಂಡದ್ದು ಮಹಿಳಾ ಅಧ್ಯಯನ. ಜಗತ್ತಿನಾದ್ಯಂತ ಲಿಂಗಭೇದವನ್ನು ವಿರೋಧಿಸಿ ಹೋರಾಡುವವರನ್ನೆಲ್ಲಾ ಒಂದು ವೇದಿಕೆಯಡಿ ತರಬಲ್ಲ ಅತ್ಯಂತ ಶಕ್ತಿಯುತ ಅಸ್ತ್ರ ಮಹಿಳಾ ಅಧ್ಯಯನ. ಮಹಿಳಾ ಶಿಕ್ಷಣದಿಂದ ಮಹಿಳಾ ಅಧ್ಯಯನದತ್ತ ನಾವು ಇಂದು ಕ್ರಮಿಸಿರುವ ಹಾದಿಯಲ್ಲಿ ಅದರ ಫಲ ಸಮಾಜಕ್ಕೆ ಸಂಪೂರ್ಣವಾಗಿ ದಕ್ಕಬೇಕಾದರೆ ಸಿದ್ಧಾಂತ ಮತ್ತು ಕ್ರಿಯೆ ಒಟ್ಟಿಗೆ ಕೈಜೋಡಿಸಬೇಕು.

- ಎನ್. ಗಾಯತ್ರಿ

ಬದಲಾವಣೆಗಾಗಿ ಕಾಯುತ್ತಾ



-ಅಲ್ಕ ರಾಜ

2004ನೇ ಸಾಲಿನ ನೊಬೆಲ್ ಬಹುಮಾನ ಪ್ರಶಸ್ತಿ ಪಡೆದ ಆಸ್ಟ್ರಿಯಾದ ಲೇಖಕಿ ಎಲ್‌ಫ್ರೀಡ್ ಯೆಲಿನೆಕ್ ತನ್ನ ತೀಕ್ಷ್ಣವಾದ ಸ್ತ್ರೀವಾದಿ ಚಿಂತನೆಗಾಗಿ ತನ್ನ ದೇಶದಲ್ಲಿಯೇ ಅಪಾರವಾದ ಪ್ರತಿರೋಧವನ್ನು ಎದುರಿಸಿದವಳು. ಸ್ವೀಡನ್ನಿನ ರಾಜ ಕಾರ್ಲ್ XVI ಗುಸ್ತಫ್‌ನಿಂದ ಪ್ರಶಸ್ತಿಯನ್ನು ಸ್ವೀಕರಿಸಲು ತಿರಸ್ಕರಿಸಿ ವಿಯನ್ನಾದಲ್ಲಿ ಈ ಪ್ರಶಸ್ತಿ ಪಡೆದ ಯೆಲಿನಿಕ್ ಹಲವಾರು ಕಾರಣಗಳಿಗಾಗಿ ಸುದ್ದಿ ಮಾಡಿದವಳು. 1901ರಲ್ಲಿ ಆರಂಭವಾದ ನೊಬೆಲ್ ಪ್ರಶಸ್ತಿಯನ್ನು ಸಾಹಿತ್ಯಕ್ಕಾಗಿ ಈವರೆಗೆ ಪಡೆದವರಲ್ಲಿ ಲೇಖಕಿಯರು ಕೇವಲ ಹತ್ತು ಮಂದಿ. ವಿಯನ್ನಾದಲ್ಲಿ ಏಕಾಂಗಿಯಾಗಿ ವಾಸಿಸುವ ಯೆಲಿನಿಕ್ ಈ ಪ್ರಶಸ್ತಿ ಪಡೆದ ಹತ್ತನೆಯ ಮಹಿಳೆ. ಅವರ ತಾಯಿ ವಿಯನ್ನಾದ ಅತ್ಯಂತ ಶ್ರೀಮಂತ ಕುಟುಂಬದಲ್ಲಿ ಜನಿಸಿದವರಾದರೆ ತಂದೆ ಜೆಕ್-ಜ್ಯೂ ಮನೆತನ ಮೂಲದವರು. ರಸಾಯನ ತಜ್ಞರಾದ ಅವರ ತಂದೆ ಅತ್ಯಂತ ಮುಖ್ಯವಾದ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದುದ ರಿಂದ ಎರಡನೆಯ ಮಹಾಸಮರದಲ್ಲಿ ಶಿಕ್ಷೆಯಿಂದ ತಪ್ಪಿಸಿ ಕೊಂಡರು.

1906ರ ಅಕ್ಟೋಬರ್ 20ರಂದು ಆಸ್ಟ್ರಿಯಾದ ಸಿರಿಯಾದಲ್ಲಿ ಜನಿಸಿದ ಎಲ್‌ಫ್ರೀಡ್ ಯೆಲಿನಿಕ್ ತನ್ನ ತಾಯ್ನಾಡಿನಲ್ಲಿಯೇ ಅತ್ಯಂತ ವಿವಾದಾಸ್ಪದ ವ್ಯಕ್ತಿ. ಅವಳ ಕಾದಂಬರಿ DIe Kinder der totenನಲ್ಲಿ ಅವಳು ಆಸ್ಟ್ರಿಯಾ ದೇಶವನ್ನು ಅಪಮಾನ ಗೊಳಿಸಿದ್ದಾಳೆ. ಆಸ್ಟ್ರಿಯಾ ದೇಶವನ್ನು ಸಾವಿನ ಸಾಮ್ರಾಜ್ಯವೆನ್ನು ವಂತೆ ಚಿತ್ರಿಸಿದ್ದಾಳೆ. ಅವಳಿಗೆ ದೊರೆತ ನೊಬೆಲ್ ಬಹುಮಾನದ ಬಗೆಗೆ ಆಸ್ಟ್ರಿಯೇ ದೇಶದ ಜನತೆಗೆ ಮಿಶ್ರಭಾವನೆಗಳಿವೆ. ಅವಳು ತನ್ನ ತಾಯ್ನಾಡಿನಲ್ಲಿ ಶಾಂತಿಧೂತಳ ಪಾತ್ರವನ್ನು ವಹಿಸಿಲ್ಲ. ಆದರೂ ಅವಳಿಗೆ ನೊಬೆಲ್ ಬಹುಮಾನ ಬಂದ ನಂತರ ಹೆಚ್ಚು ಹೆಚ್ಚು ಜನರು ಅವಳು ಬರೆದ ಪುಸ್ತಕವನ್ನು ಕೊಂಡು ಓದುತ್ತಿದ್ದಾರೆ. ಆಸ್ಟ್ರಿಯಾದಲ್ಲಿ ಪ್ರತಿಯೊಂದು ಪುಸ್ತಕದ ಅಂಗಡಿಯೂ ಅವಳ ಪುಸ್ತಕಗಳನ್ನು ಪ್ರದರ್ಶಿಸುತ್ತಿವೆ ಮತ್ತು ಮಾರಾಟ ಮಾಡುತ್ತಿವೆ. ಅವಳೊಡನೆ ಅಲ್ಕಾ ರಜ ನಡೆಸಿದ ಸಂದರ್ಶನ ಅಲ್ಲಿದೆ :

ಪ್ರಶ್ನೆ :- ನಿಮ್ಮ ದೇಶದ ಸಾಮಾಜಿಕ-ರಾಜಕೀಯ ವ್ಯವಸ್ಥೆಯನ್ನು ಕುರಿತಂತೆ ಅತ್ಯಂತ ತೀಕ್ಷ್ಣವಾಗಿ ಟೀಕೆ ಮಾಡಿರುವ ಆಸ್ಟ್ರಿಯಾದ ಕೆಲವೇ ಸಾಹಿತಿಗಳಲ್ಲಿ ನೀವೂ ಒಬ್ಬರು. ಆಸ್ಟ್ರಿಯಾ ಸರ್ಕಾರವನ್ನು ಕುರಿತು ನೀವು ಉಗ್ರವಾಗಿ ಟೀಕಿಸಿದ್ದೀರ. ಅದಕ್ಕೆ ಕಾರಣವೇನು ?

ಉತ್ತರ :- ಆಸ್ಟ್ರಿಯಾದ ವ್ಯವಸ್ಥೆಯನ್ನು ಕುರಿತಂತೆ ಟೀಕಾ ಪ್ರಹಾರ ಮಾಡಿರುವ ಮಹಿಳೆಯರು ಮತ್ತು ಲೇಖಕಿಯರು ಹಲವಾರು ಮಂದಿಯಿದ್ದಾರೆ. ನಾನು ಮುಕ್ತವಾಗಿ ಭಾಷಣಗಳಲ್ಲಿ ಟೀಕಿಸಿರಬಹುದು. ಉಳಿದವರು ತಮ್ಮ ಲೇಖನಗಳಲ್ಲಿ ಉಗ್ರವಾಗಿ ಟೀಕಿಸಿರಬಹುದು. ನನ್ನ ಟೀಕೆ, ಆಸ್ಟ್ರಿಯಾ ಸರ್ಕಾರವನ್ನು ಕುರಿತಾಗಿಯಲ್ಲ. ಆದರೆ ಆಸ್ಟ್ರಿಯಾ ತನ್ನ ಚರಿತ್ರೆಯನ್ನು ಮರೆತಿದೆ. ಸರ್ಕಾರದ ಅಂಧಃಪತನವಾದದ್ದು 2000ರಲ್ಲಿ, ಬಲಪಂಥೀಯ ಪಕ್ಷಗಳು ರಾಜಿಯಾಗಿ ಸಂಮಿಶ್ರ ಸರ್ಕಾರವನ್ನು ರಚಿಸಿದಾಗ. ಅಂದಿನಿಂದ ನಾನು ಮಾತ್ರವಲ್ಲ, ನನ್ನ ಹಲವಾರು ಸಂಗಾತಿಗಳು ಸರ್ಕಾರವನ್ನು ಟೀಕಿಸುತ್ತಲೇ ಇದ್ದೇವೆ. ಬಲಪಂಥೀಯ ಪಕ್ಷಗಳು ನನ್ನನ್ನು ಕಟುವಾಗಿ ಟೀಕಿಸುತ್ತದೆ. ನಾನು ಅದನ್ನು ಸನ್ಮಾನವೆಂದೇ ಭಾವಿಸುವೆ.

ಪ್ರಶ್ನೆ :- ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಅನ್ಯಾಯದ ವಿರುದ್ಧ ದನಿಯೆತ್ತಿ ಬರಹ ಕೈಗೊಂಡ ಲೇಖಕಿಯರನ್ನು ಸ್ತ್ರೀವಾದಿಗಳು ಎಂದು ಹಣೆಪಟ್ಟಿ ಕಟ್ಟಿ ಬಿಡುತ್ತಾರಲ್ಲ ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

ಉತ್ತರ :- ಇದು ಸಹಜವಾದದ್ದೇ. ಬುದ್ಧಿವಂತಳಾದ

ಮಹಿಳೆಯೊಬ್ಬಳು ಸ್ತ್ರೀವಾದಿಯಾಗಿರಲು ಮಾತ್ರ ಸಾಧ್ಯ. ಬಹಳಷ್ಟು ಸಂದರ್ಭದಲ್ಲಿ ಇಂತಹ ಟೀಕೆಗಳು ನಾವು ಯಾರನ್ನು ಬೆಂಬಲಿಸುತ್ತೇವೋ ಅವರಿಂದಲೇ ಬಂದವಾಗಿರುತ್ತದೆ. ಒಮ್ಮೆ ಒಬ್ಬ ವಯಸ್ಸಾದ ಮಹಿಳೆಯೊಬ್ಬಳು ನಾನು ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ನನ್ನ ಮುಖಕ್ಕೆ ಉಗುಳಿದಳು. ಸ್ತ್ರೀವಾದವೆನ್ನುವುದು ಕೆಲವೊಮ್ಮೆ ಸ್ಟೀರಿಯೋಟೈಪ್ ಆಗಿಬಿಡುವುದೂ ಉಂಟು. ಗಂಡಸರಿಗಿಂತ ಹೆಚ್ಚು ಹೆಂಗಸರೇ ಇಂದು ಅಧ್ಯಯನ ಮಾಡುತ್ತಿದ್ದಾರೆ. ಆದರೆ ಅವರು ಹೆಚ್ಚು ಹೆಚ್ಚು ಓದಿದಷ್ಟೂ ಅವರಿಗೆ ಉದ್ಯೋಗಾವಕಾಶಗಳು ಕಡಿಮೆ. ವಿಶ್ವವಿದ್ಯಾಲಯದಲ್ಲಿ ಪ್ರಸೂತಿ ಶಾಸ್ತ್ರದಲ್ಲಿ ಮಹಿಳೆಯೊಬ್ಬಳನ್ನು ಪ್ರೊಫೆಸರ್ ಆಗಿ ನೇಮಕ ಮಾಡಿದ್ದು ಕಳೆದ ಒಂದು ವರ್ಷದ ಹಿಂದಷ್ಟೇ. ಅಮೆರಿಕದಲ್ಲೂ ಅತ್ಯಂತ ಹೆಚ್ಚು ವೇತನ ಪಡೆಯುವ ಮ್ಯಾನೇಜರ್ ಕಾರ್ಲಿ ಫ್ಲೋರಿನಾ ತನ್ನ ಪುರುಷ ಸಂಗಾತಿಗಳಿಗಿಂತ ಕಡಿಮೆ ಸಂಬಳವನ್ನೇ ಪಡೆಯುತ್ತಾಳೆ. ಸದ್ಯದ ಭವಿಷ್ಯದಲ್ಲಿ ನಾನು ಅಂತಹ ಬದಲಾವಣೆಯನ್ನೇನೂ ಕಾಣುವುದಿಲ್ಲ.

ಪ್ರಶ್ನೆ :- ನೀವು ಶೋಷಣೆ ಮತ್ತು ಅನ್ಯಾಯದ ವಿರುದ್ಧ ದನಿಯೆತ್ತಿದ್ದೀರಿ. ನೀವು ಕಾರ್ಯಕರ್ತೆಯಂಥ ಮಾತ್ರವಲ್ಲ ಕಮ್ಯೂನಿಸ್ಟ್ ಪಕ್ಷದ ಸದಸ್ಯೆಯೆಂದೂ ಕೂಡ ವಿಯನ್ನಾದ ವ್ಯವಸ್ಥೆಯ ಕ್ರೂರದೃಷ್ಟಿಗೆ ಗುರಿಯಾಗಿದ್ದೀರ. ಹಿಂಸೆ ಮತ್ತು ಸಾಮಾಜಿಕ ಅನ್ಯಾಯ ತಾಂಡವವಾಡುವ ಜಗತ್ತಿನಲ್ಲಿ ನಿಮ್ಮ ಅನಿಸಿಕೆಗಳೇನು ?

ಉತ್ತರ :- ಅತ್ಯಂತ ನಿರಾಶಾದಾಯಕವಾಗಿದೆ. ನನ್ನ ಅಭಿಪ್ರಾಯವನ್ನು ಯಾರೂ ಕೇಳುವುದೂ ಇಲ್ಲ. ಈ ನೊಬೆಲ್ ಬಹುಮಾನವೂ ಅವರಲ್ಲಿ ಯಾವ ಬದಲಾವಣೆಯನ್ನು ತರುವುದಿಲ್ಲ. ಮಹಿಳೆಯ ಅಭಿಪ್ರಾಯವನ್ನು ಯಾರೂ ಗಂಭೀರವಾಗಿ ಸ್ವೀಕರಿಸುವುದೇ ಇಲ್ಲ. ನಾನು ಇಂತಹ ಸಾಮಾಜಿಕ ಪರಿಸ್ಥಿತಿಯನ್ನು ಯಾವಾಗಲೂ ಪ್ರತಿಭಟಿಸುತ್ತಲೇ ಇರುತ್ತೇನೆ. ಆದರೆ ಉಳಿದವರಾದರೋ ಸಮಾಜದಲ್ಲಿನ ಅಸಮಾನತೆಯನ್ನು ಅನುಭವಿಸುತ್ತಲೇ ಅದರಿಂದ ಲಾಭ ಮಾಡಿಕೊಳ್ಳುತ್ತಾ ಇರುತ್ತಾರೆ. ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅವರದೇ ಮೇಲುಗೈಯ್ಯಾಗಿರುತ್ತದೆ. ಆದ್ದರಿಂದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಾಗಿ ಚಳುವಳಿಗಳು ನಡೆಯದ ಹೊರತು ಹೊಸ ಚಳುವಳಿಯಿಲ್ಲದೆ ಪರ್ಯಾಯ ವ್ಯವಸ್ಥೆ ಬರಲಾರದು.

– ಕೃಪೆ : ದಿ ಹಿಂದೂ

Statement about ownership and other particulars about News paper ACHALA.

Form IV (See Rule 8)

1) Place of Publication : Bangalore, Karnataka State.

2) Periodicity of Publication : Monthly.

3) Printer's Name and Address : Lipi Mudrana, Gandhi Bazar, Basavanagudi, Bangalore - 4.

4) Publisher's name : Dr. G. Ramakrishna for Jagruthi Mahila Adhyayana Kendra, Bangalore.

5) Nationality : Indian
Address : 108, Skyline Surabhi, 14-P, Vidyapeeta Road, B.S.K. III Stage, Bangalore - 85.

6) Editor's Name : Dr. N. Gayathri
Nationality : Indian
Address : 108, Skyline Surabhi, 14-P, Vidyapeeta Road, B.S.K. III Stage, Bangalore - 85.

7) Name and Address of Individuals who own the newspaper : Jagruthi Mahila Adhyayana Kendra, 108, Skyline Surabhi, 14-P, Vidyapeeta Road, B.S.K. III Stage, Bangalore - 85.

I, Dr. G. Ramakrishna here by declare that the particulars given above are true to the best of my knowledge and belief.

Bangalore — Sd/-
25.3.2005 — G. Ramakrishna

ಒಂದು ಕ್ಷೇತ್ರಕಾರ್ಯಾನುಭವ

- ಡಾ॥ ಶೈಲಜ ಹಿರೇಮಠ

Archaeologyಯಲ್ಲಿ ಶಾಸನ, ನಾಣ್ಯದಂತಹ ನಿಖರವಾದ ಮಾಹಿತಿಗಳು ದೊರೆಯುವುದರಿಂದ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಯಾಸ ಪಡಬೇಕಾಗಿಲ್ಲ. ಅಂದರೆ social Archaeology ಹಾಗಲ್ಲ. ವಕ್ತೃ ನೀಡಿದ ವಿಷಯ ಎಷ್ಟೋ ಬಾರಿ ಸೂಕ್ತ ಮಾಹಿತಿಯಾಗಿರದೇ ಹೋಗಿರಬಹುದು. ಒಂದು ವೇಳೆ ಮಾಹಿತಿ ದೊರೆತರೂ ಭೂತದ ಜೊತೆಗೆ ವರ್ತಮಾನ, ವರ್ತಮಾನದ ಜೊತೆಗೆ ಭೂತ ಮಿಳಿತವಾಗಿರುತ್ತದೆ. ಕೆಲವೊಮ್ಮೆ ಭವಿಷ್ಯತ್ತು ಸೇರಿಕೊಂಡಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಹೀಗಾಗಿ ಅವುಗಳಲ್ಲಿಯ ಈ ಎಲ್ಲ ಅಡತಡೆಗಳಿಂದ ಬಿಡುಗಡೆಗೊಳಿಸಿಕೊಂಡು ಸರಿಯಾದ ಮಾಹಿತಿಯನ್ನು ಕಲೆಹಾಕಿ, ಸಂಶೋಧನೆ ಮಾಡುವುದು ಅಷ್ಟು ಸುಲಭವಲ್ಲ.

ಒಂದು ಕಾಲಘಟ್ಟದಲ್ಲಿ ತುಳಿತಕ್ಕೊಳಗಾಗಿ ಸಾಂಸ್ಕೃತಿಕ ಸಂಕೋಚಗಳೊಂದಿಗೆ ಬದುಕುತ್ತಿರುವ ಜನರನ್ನು ಅದರಲ್ಲೂ ಮಹಿಳೆಯರನ್ನು ಪ್ರಶ್ನಿಸಿ ಮಾಹಿತಿ ಪಡೆಯುವುದು ಕಷ್ಟ. ಬಹಳಷ್ಟು ಪಾತರದವರು ಮಾಹಿತಿಯನ್ನು ನೀಡಲು ತಿರಸ್ಕರಿಸುವುದರೊಂದಿಗೆ ತಾವು ಪಾತರದವರಲ್ಲವೆಂದು ಖಡಾಖಂಡಿತವಾಗಿ ನಿರಾಕರಿಸುತ್ತಾರೆ. ಸಂದರ್ಶನ ನೀಡಲು ಒಪ್ಪಿದವರು, ಅವುಗಳನ್ನೆಲ್ಲಾ ವಿವರವಾಗಿ ಹೇಳಲು ನಿರಾಕರಿಸಿದ್ದೇ ಹೆಚ್ಚು.

ಮೇ ತಿಂಗಳ ಬಿಸಿಲಬೇಗೆಯಲ್ಲಿ ಪ್ರಥಮ ಬಾರಿಗೆ ಲಕ್ಷ್ಮೇಶ್ವರಕ್ಕೆ ಹೋದೆನು. ಅಪರಿಚಿತ ಊರಿನಲ್ಲಿ ಓಡಾಡಿ ವಿಷಯ ಸಂಗ್ರಹಿಸುವುದು ಕಷ್ಟವೆಂದು ಹೋಗುವ ಪೂರ್ವದಲ್ಲಿ ನನ್ನ ಭಾವನವರಿಂದ ಸ್ಥಳೀಯರೊಬ್ಬರ ವಿಳಾಸ ಪಡೆದುಕೊಂಡಿದ್ದೆನು. ಅದಾಗಲೇ ಸೂರ್ಯ ತನ್ನ ತಾಯಿಗರ್ಭವನ್ನು ಮರಳಿ ಸೇರುವ ಹೊತ್ತು. ಆದರೂ ಗಾಳಿಯಲ್ಲಿ ತಂಪಿರಲಿಲ್ಲ. ನಾನು ಪಡೆದುಕೊಂಡ ನಿಂಬಯ್ಯ ಸಾಮಿಮಠ ಅವರ ವಿಳಾಸವನ್ನು ಕೇಳುತ್ತಲೇ ಪಾತರದವರ ಕುರಿತು ವಿಚಾರಿಸಿದೆ. ಅದೆಷ್ಟೋ ಜನ (ನವ ಪೀಳಿಗೆ) ಪಾತರದವರೆಂದರೆ ಯಾರು ಎಂದು ನನ್ನನ್ನೇ ಪ್ರಶ್ನಿಸಿದಾಗ ಕಕ್ಕಾವಿಕ್ಕಿಯಾದೆ. ವಯಸ್ಸಾದ ಹಲವರು "ಅಲ್ಲ ಸ್ವಾಮಿ, ಗುಲಾಬ ಸಾನಿ ಅಂತ ಇದ್ರು. ಈಗ ಅವರು ಸತ್ತಾರೋ ಅದಾರೋ ಒಂದೂ ಗೊತ್ತಿಲ್ಲ" ಎಂದರು. ಕರುಳು ಚುರ್ ಎಂದಿತು.

ಅದೆಷ್ಟೋ ನೋವು ಅಪಮಾನಗಳನ್ನು ಎದುರಿಸುತ್ತಲೇ ದೇವಾಲಯದ, ಉಳ್ಳವರ ಅಲಂಕಾರವಾಗಿದ್ದು ಜನಸಾಮಾನ್ಯರ ಕಣ್ ಸವಿಯಾಗಿದ್ದ ಅವರು, ಇಷ್ಟು ಬೇಗನೆ ಅದೂ ಅವರ ಬದುಕು, ಸಾವನ್ನು ತಿಳಿಯದಷ್ಟು ಮಾಸಿಹೋಗಿದ್ದಾರೆಂದು ಎನಿಸಿರಲಿಲ್ಲ. ಆಗಾಗ ಬಂದು ತಾಗುತ್ತಿದ್ದ ಬಿಸಿಗಾಳಿ, ಲಕ್ಷ್ಮೇಶ್ವರದ ಸಾನಿಯರ ನಿಟ್ಟುಸಿರ ಕಾವಾಗಿತ್ತೇನೋ ?

ಹುಡುಕಿಕೊಂಡು ಹೋದವರ ಮನೆ ಸಿಕ್ಕಿತು. ಅವರು ಎಲ್ಲ ರೀತಿಯಿಂದಲೂ ಸಹಕರಿಸಿದರು. ಆ ರಾತ್ರಿಯಲ್ಲೇ ಸೋಮನಾಥ ದೇವಸ್ಥಾನಕ್ಕೆ ಹೋದೆನು. ಅರ್ಚಕರು ಹೇಳಿದರು, "ಬಚ್ಚಾಸಾನಿ, ಅಲ್ಲಾಸಾನಿ, ಗುಲಾಬ್‌ಸಾನಿ ಅಂತ ಇದ್ರು. ಅವರೊಳಗೆ ಗುಲಾಬಸಾನಿ ಮಾತ್ರ ಬದಕ್ಯಾಳ. ಗುಡಿ ಹಿಂಭಾಗಕ್ಕೆ ಹ್ವಾದ್ರ ಪಾತರದವರ ಓಣಿ ಸಿಗತೈತಿ. ಅಲ್ಲಿ ಆಕಿ ಸಿಗತಾಳ ನೋಡ್ರಿ". ಹತ್ತಿರ ಹತ್ತಿರ ರಾತ್ರಿ ಒಂಬತ್ತು ಗಂಟೆಯಾಗಲು ಬಂದದ್ದರಿಂದ, ಜೊತೆಯಲ್ಲಿ ಬಂದಿದ್ದ ಸೌಭಾಗ್ಯ 'ನಾಳೆ ಹೋಗೋಣ' ಎಂದಳು. ಹೀಗಾಗಿ ಮನೆಗೆ ಮರಳುವುದು ಅನಿವಾರ್ಯವಾಯಿತು.

ಬೆಳಗಿನ ಹತ್ತು ಗಂಟೆಯ ಹೊತ್ತಲ್ಲಿ ಪಾತರದವರ ಮನೆ ಹುಡುಕಿಕೊಂಡು ಹೊರಟೆನು. ನನ್ನ ಜೊತೆ ಸೌಭಾಗ್ಯ ನಿಂಬಯ್ಯ ಸ್ವಾಮಿಮಠ ಕೂಡ ಬಂದಿದ್ದಳು. ಹೆಚ್ಚು ಕಡಿಮೆ ಹಾಳು ಬಿದ್ದಿದ್ದ ಮನೆಯ ಮುಂದೆ ನಿಂತಿದ್ದೆವು. ಗುಲಾಬಸಾನಿಯ ಕುರಿತು ವಿಚಾರಿಸುತ್ತಿದ್ದಾಗ ಅದರ ಎದುರುಗಡೆಯ ಮನೆಯಲ್ಲಿ ಮುರುಕು ಕಟ್ಟಿಗೆಯ ಮಂಚದ ಮೇಲೆ ಕೆಮ್ಮುತ್ತ ಕುಳಿತ 80ರ ಮೇಲ್ಪಟ್ಟ ವಯಸ್ಸಿನ ಹಿರಿಯ ಅಜ್ಜಿಯೊಬ್ಬಳು ಕೈಮಾಡಿ ಕರೆದಳು. "ಆಕಿ ಸತ್ತ ಬಾಳ ವರ್ಷ ಆತು. ನಾನು ಅಲ್ಲಾ ಸಾನಿ. ಬಾಬಾ. ಏನಾಗಬೇಕಿತ್ತು ?" ಎಂದು ಕೇಳಿದಳು. ಕ್ಷಣಕಾಲ ಸ್ತಬ್ಧಳಾದೆ. ಇಡೀ ಬದುಕನ್ನೇ ದೇವಸ್ಥಾನಕ್ಕೆ ಮುಡುಪಾಗಿಟ್ಟ ಪಾತರದವರ ಸಾವು, ಬದುಕಿನ ಮೇಲೆ ನಿಗಾ ಇಡದಷ್ಟು ಪುರೋಹಿತರಿಗೆ ಅವರು ಅಪರಿಚಿತರಾದರೆ ಎಂದೆನಿಸಿ ದೀರ್ಘವಾದ ನಿಟ್ಟುಸಿರನ್ನು ಬಿಟ್ಟೆನು.

ಮನೆಯ ಒಳಗೆ ಪ್ರವೇಶಿಸಿದೆನು. ತನ್ನ ಸ್ವಚ್ಛತೆಯಿಂದ ಮುರುಕಲು ಮನೆಯೂ ಕಂಗೊಳಿಸುತ್ತಿತ್ತು. ಮೊದಲು ಏನು ಮಾತಾಡಬೇಕೆಂಬುದು ತೋಚದೆ 'ಮನೆ ಚೆನ್ನಾಗಿದೆ' ಎಂದು ನಕ್ಕೆ. ತನ್ನ ಹಿಂದಿನ ಆರ್ಥಿಕ ದೌಲತ್ತನ್ನು ನೆನಪಿಸಿಕೊಂಡು ಕಣ್ಣೀರಿಡುತ್ತಾ "ದೇವಸ್ಥಾನದವರು ಕೊಟ್ಟ ದೊಡ್ಡ ಮನಿಯಿತ್ತು. ಬಾಳ ಚಂದ ಇತ್ತು ತಂಗಿ. ಹೊಟ್ಟೆ ಬಟ್ಟೆಗಿ ಕಡಿಮೆ ಬಿದ್ದದಕ ಮೊನ್ನೆ ಮೊನ್ನೆ ಅಂದ್ರ ಎಂಟಹತ್ತು ವರ್ಷಗಳ ಹಿಂದೆ ನನ್ನ ಕೈಯಾರೆ ನಾನಽ ಮಾರಾಟ ಮಾಡಿದ್ನಿ" ಎಂದು ದುಃಖಿಸಿದಳು. "ಹೌದು ನಾನು ಪಾತರದಾಕಿ.

ಹಿಂದೆ ಒಂದ ಕಾಲಕ್ಕ ರಾಜ ವೈಭವದಾಗ ಮೆರೆದ ಜನಾ ನಾವು. ಈಗಿನ ಜನಾ ಹೆಂಗ ನೋಡತಾರ ತಾಯಿ ? ಅದನ್ನ ನೆನಪ ಮಾಡಕೊಂಡ್ರ ಈ ಭೂಮಿಮ್ಯಾಲ ಬದಕಿರಬಾದ್ರು ಅನಸ್ತದ. ಆದರೂ ಲಂಡ ಜೀವ. ಇನ್ನೂ ಬದಕೇನಿ ನೋಡು ನಾನು'' ಎಂದು ನಿಡಿದಾದ ಉಸಿರನ್ನು ಹಾಕಿ ಮತ್ತೆ ಹೇಳತೊಡಗಿದಳು : ತುಪ್ಪದಾಗ ಕೈತಕ್ಕೊಂಡ ಜನಾ ನಾವು. ಈಗ ಹೊತ್ತಿನ ಊಟಕ್ಕೂ ಗತಿಯಿಲ್ಲ. ಅವರ್ನ- ಇವರ್ನ ಕಾಲಹಿಡಿದು ಸರಕಾರದಿಂದ 250 ರೂ. ಪಿಂಚಣಿ ತಗೊಳ್ಳಾಕತ್ತಿನಿ. ಈಗಿನ ಕಾಲದಾಗ ಅಷ್ಟರಾಗ ತಿಂಗಳಪೂರ್ತಿ ಹೊಟ್ಟೆ ಹ್ಯಾಂಗ ತುಂಬತೈತಿ ಹೇಳು ?''


ಅಂದು, ತನ್ನ ಕುಟುಂಬದ ಹಿರಿಯರ ಕುರಿತು ತನ್ನ ಸಂಗೀತ ಸಾಧನೆಯ ಕುರಿತು, ಹಿಂದಿದ್ದ ಐಶ್ವರ್ಯ ಕುರಿತು, ಮಾಹಿತಿ ನೀಡಿದಳೇ ವಿನಃ ಪಾತರದ ಬದುಕಿನ ಮುಖ್ಯ ಘಟ್ಟಗಳನ್ನು ಹೇಳಲು ನಿರಾಕರಿಸಿದಳು. ಈ ಮಧ್ಯೆ ಚಹಾ ಕುಡಿಯಲು ಒತ್ತಾಯಿಸಿದಳು. ಆ ಬಿಸಿಲ ಬೇಗೆಯಲ್ಲಿ 'ಚಹಾ'ವನ್ನು ನೆನಪಿಸಿಕೊಂಡೇ ಬೇಡವೆಂದೆ. ಆ ಪೂರ್ವದಲ್ಲಾಗಲೇ ನನ್ನ ಜಾತಿ, ಊರು, ಉದ್ಯೋಗ, ಮದುವೆ ಎಲ್ಲದರ ಕುರಿತು ವಿಚಾರಿಸಿಕೊಂಡಿದ್ದಳು. ನನ್ನ ನಿರಾಕರಣೆ, ಅವಳಿಗೆ ಜಾತಿಯ ಅಂತರ ಕಾಯ್ದುಕೊಳ್ಳುತ್ತಿದ್ದೇನೆ ಎನಿಸಿ ನನ್ನ ಮೇಲೆ ಸಿಟ್ಟು ಮಾಡಿಕೊಂಡಳು. ಅದನ್ನು ಅರ್ಥಮಾಡಿಕೊಂಡ ನಾನು ತಕ್ಷಣ ಚಹಾ ಕುಡಿಯಲು ಮುಂದಾದೆ. ಪಕ್ಕದಲ್ಲಿದ್ದ ಸೌಭಾಗ್ಯ ಚಿವುಟಿದಾಗ, ಅವರ ಮನೆಯಲ್ಲಿ ಉಳಿದುಕೊಂಡಿದ್ದರಿಂದ ಸಂದಿಗ್ಧತೆಗೆ ಸಿಲುಕಿಕೊಂಡೆ. ಚಹಾ ಕುಡಿಯಲು ನಿರ್ಧರಿಸಿ ತುಟಿಗೆ ಲೋಟವನ್ನಿಟ್ಟುಕೊಳ್ಳಬೇಕು ಎನ್ನುವಷ್ಟರಲ್ಲಿ, ಎದುರಿಗೆ ಕುಳಿತ ಅಲ್ಲಾಸಾನಿಯ ತಂಗಿ ಗಜರಾಮಾಳ ಮೊಮ್ಮಕ್ಕಳು ಆಸೆಗಣ್ಣಿನಿಂದ ನೋಡುತ್ತಿದ್ದವು. ಕುಡಿಯಲು ಮನಸ್ಸಾಗದೆ ಆ ಮಕ್ಕಳಿಗೆ ನೀಡಿದೆ. ತಪ್ಪಾಗಿ ಭಾವಿಸಿಕೊಂಡ ಅಲ್ಲಾ ಸಾನಿ ''ಬಾಂಬ್ರ ಮನಿಯಾಗ ಊಟ ಮಾಡತಿದ್ವಿ. ಅವ್ರೂ ನಾವು ಕೊಟ್ಟದ್ದನ್ನ ತಿಂತಿದ್ರು. ಅವರು ನಿಮ್ಹಂಗ ಮಾಡಲಿಲ್ಲ ತಗಿ'' ಎಂದಾಗ ಏನು ಹೇಳಬೇಕೆಂದು ತಿಳಿಯಲಿಲ್ಲ. ಮುಂದಿನ ನನ್ನ ಪ್ರಶ್ನೆಗಳಿಗೆ ಉತ್ತರ ನೀಡಲು ನಿರಾಕರಿಸಿದಳು.

ಮರುದಿನ ನಾನೊಬ್ಬಳೇ ಅಲ್ಲಾಸಾನಿಯ ಮನೆಗೆ ಹೋದೆನು. 'ಚಹಾ ಮಾಡಿಕೊಡು' ಎಂದು ಕಾಡಿದೆ. ಸಿಟ್ಟು ಮಾಡಿಕೊಂಡ ನನ್ನಜ್ಜಿಯಂತೆ ''ಹೋಗ್ಹೋಗು ನಮ್ಮನಿಯಾಗ ಚಾ ಪುಡಿಯಿಲ್ಲ. ಅಲ್ಲದ ನಮ್ಮಂತವರ ಮನಿಯಾಗ ನಿಮ್ಮಂತ ದೊಡ್ಡವರು ಚಾ ಕುಡಿಯಬಾರದು. ನೀರ ಕುಡಿಬಾರ್ದು ಗೊತ್ತದ ಇಲ್ಲೊ ನಿನಗ'' ಎಂದು ಹುಸಿ ಮುನಿಸು ತೋರಿದಳು: ಪಟ್ಟುಬಿಡದ ನಾನು ಚಹಾ ಬಿಟ್ಟು ಊಟವನ್ನು ಕೇಳತೊಡಗಿದೆ. ಅವಳು ಮಾಡಿಕೊಟ್ಟ ಚಹಾವನ್ನು ಕುಡಿದಾಗ ಗೆಲುವಾದಳು. ಆದರೂ ನನ್ನ ಪ್ರಮುಖ ಪ್ರಶ್ನೆಗಳಿಗೆ ಉತ್ತರ ನೀಡಲು ನಿರಾಕರಿಸುತ್ತಾ ''ಥೇ ! ಥೇ ! ಅದೇನ ಹಾಳ ನೆನಪ ತೆಗಿತಿ ಬಿಡಯವ್ವಾ, ಬ್ಯಾರೆ ಏನರ ಕೇಳು ಹೇಳತೀನು'' ಎಂದಳು. ಎಷ್ಟು ತಿಳಿಸಿ ಹೇಳಿದರೂ ಅವಳಿಂದ ಇದೇ ಉತ್ತರ ಎದುರಾಗುತ್ತಿತ್ತು.

ಮೂರನೆಯ ದಿನ ನಿಟ್ಟುಸಿರು ಬಿಟ್ಟು ಕೆಲವೊಂದನ್ನು ಬಿಚ್ಚಿಟ್ಟಳು. ಕೆಲವೊಂದು ಬಚ್ಚಿಟ್ಟಳು. ಎಂದಾದರೊಂದು ದಿನ ಸಂಪೂರ್ಣ ಮಾಹಿತಿ ನೀಡಿಯಾಳು ಎಂಬ ಆಶೆಹೊತ್ತು ಮತ್ತೆ ಮತ್ತೆ ರಜೆ ಹಾಕಿಕೊಂಡು ಲಕ್ಷ್ಮೇಶ್ವರಕ್ಕೆ ಹೋಗಿ, ಅವಳ ಸುಖ, ದುಃಖಗಳನ್ನು ವಿಚಾರಿಸಿದೆ. ಆರ್ಥಿಕ ಸಹಾಯ ಮಾಡಿದೆ. ಹಂತಹಂತವಾಗಿ ಅವಳ ವಿಶ್ವಾಸವನ್ನು ಗೆಲ್ಲಲು ಪ್ರಯತ್ನಿಸಿದೆ. ಕೊನೆಗೊಂದು ದಿನ ಪ್ರೀತಿ-ವಿಶ್ವಾಸದಿಂದ ಮಹತ್ವದ ಮಾಹಿತಿಯನ್ನು ನೀಡಿದಳು. ಮತ್ತದೆಷ್ಟೋ ಪ್ರಮುಖ ಮಾಹಿತಿಗಳನ್ನು ಸಾಂಸ್ಕೃತಿಕ ಸಂಕೋಚದಿಂದ ಹೇಳಲೇ ಇಲ್ಲ. ತನ್ನ ಬಾಲ್ಯದ, ಯೌವ್ವನದ ಜೀವನ ಕ್ರಮಗಳನ್ನು ನೆನಪಿಸಿಕೊಂಡು ಅದೆಷ್ಟೋ ಬಾರಿ ನಿಟ್ಟುಸಿರನ್ನು ಬಿಟ್ಟಳು. ಕಣ್ಣೀರಿಟ್ಟಳು. ಮೌನವಾದಳು. ಸಿಟ್ಟುಗೊಂಡಳು. ಬ್ರಾಹ್ಮಣರ ವಿರುದ್ಧ ಆಕ್ರೋಶ ಕಾರಿದಳು. ಸೂಕ್ಷ್ಮ ಮನಸ್ಸಿನ ಕ್ಷೇತ್ರ ಕಾರ್ಯಕರ್ತರಿಗೆ ಇವೆಲ್ಲವೂ ವಿವರಿಸಲಾಗದ, ಹೇಳಲಾಗದ ಅದೆಷ್ಟೋ ಮಾಹಿತಿಗಳನ್ನು ನೀಡುತ್ತವೆ. ಮಾಮ್ಲೆದಾರ, ಸುಬೇದಾರ, ಮೇಲ್ವರ್ಗದವರೊಂದಿಗಿನ ನಿಕಟ ಒಡನಾಟವನ್ನು ಹಿಗ್ಗಿನಿಂದ ಹೇಳುತ್ತ ಹೆಮ್ಮೆ ಪಟ್ಟುಕೊಂಡಳು. ಈಗಿನ ಪಾತರದವರ ಪರಿಸ್ಥಿತಿಯನ್ನು ಕಂಡು ಕಣ್ಣೀರಿಟ್ಟಳು. ಮರುಗಳಿಗೆಯಲ್ಲೇ ''ಹಿಂಗಾದದ್ದ ಚಲೊ ಆಯ್ತು ತಾಯಿ. ಯಾರ್ಗಿ ಬೇಕು ಈ ದರಿದ್ರ ಪದ್ಧತ ?'' ಮದಿವಿ ಇರಲಾರ್ದ ಜೀವನಾ ಅದೆಂಥದು ತಗಿ. ಅದಕ್ಕೇನ ಕುಟುಂಬ ಅಂತಾರಾ ? ಸರಕಾರ ಕಾಯ್ದಾದಿಂದ ನಮ್ಮ ಪದ್ಧುತ ನಿಲ್ಲಿಸಿ ಬಾಳ ಚಲೂ ಕೆಲ್ಸಾ ಮಾಡ್ತು. ಆದ್ರ ಜನಾ ನಮ್ಮನ್ನ ಹಿಂಗ ನೋಡಬಾರ್ದು. ಒಂದು ಕಾಲಕ್ಕ ನಾವೂ ನಮ್ಮ ಇಚ್ಚತ್ತಿನ್ಯಾಗ ಬದುಕಿದೋರು'' ಎಂದು ದಿಗಂತವನ್ನೇ ದಿಟ್ಟಿಸಿ ನೋಡುತ್ತ ಕೆಲಕಾಲ ಮೌನವಾದಳು.

ಮೇಲಿಂದ ಮೇಲೆ ಅಲ್ಲಾಸಾನಿಯ ಹತ್ತಿರ ಬಂದು ಮಾತನಾಡಿಸಿಕೊಂಡು ಹೋದುದನ್ನು ಗಮನಿಸಿದವರು ಹಾಗೂ ನನ್ನ ಸಂಶೋಧನಾ ವಿಷಯವನ್ನು ಕುರಿತು ವಿಚಾರಿಸಿದ ಅಲ್ಲಿಯವರು ''ನೀವು ಪಾತರದವರೇನು ?'' ಎಂದು ಕೇಳುತ್ತ ನನ್ನನ್ನೇ ಅಳತೆ ಮಾಡುವಂತೆ ನೋಡಿದಾಗ ಹೌಹಾರಿದೆ. ಉರಿದುಬಿದ್ದೆ. ನಾನು ಒಂದು ಕ್ಷಣ ಎದುರಿಸಲಾಗದ ನೋಟವನ್ನು ಅಪಮಾನವನ್ನು ಬದಕಿನುದ್ದಕ್ಕೂ ಅದನ್ನೇ ಎದುರಿಸುತ್ತ ಅದ್ಹೇಗೆ ಸಹಿಸಿಕೊಂಡಿದ್ದಾರೆ ಎಂದೆನಿಸಿದಾಗ ಹೊಟ್ಟೆಯಲ್ಲಿ ಕಸಿವಿಸಿ ಆಯಿತು.

ಅಸ್ತಂಗತವಾದ ಹೋರಾಟಗಾರ್ತಿ



1980ರ ಸಂದರ್ಭ. ಪಾರ್ಲಿಮೆಂಟಿನಲ್ಲಿ ಮಥುರಾಳ ಮೇಲೆ ನಡೆದ ಅತ್ಯಾಚಾರಕ್ಕೆ ಸಂಬಂಧಪಟ್ಟಂತೆ ಬಿರುಸಿನ ಚರ್ಚೆ ನಡೆಯುತ್ತಿದ್ದ ಕಾಲ. ದೇಶಾದ್ಯಂತ ಮಥುರಾಳಿಗಾದ ಅನ್ಯಾಯಕ್ಕೆ ಪ್ರತಿಭಟನೆ, ಮೆರವಣಿಗೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಸಂಸತ್ ಸದಸ್ಯರ ತಂಡವೊಂದು ಪ್ರತಿ ರಾಜ್ಯಗಳಿಗೂ ಭೇಟಿ ನೀಡಿ ಅತ್ಯಾಚಾರ ಅಪರಾಧದ ಮಸೂದೆಯ ಜಾರಿಗೆ ಜನಾಭಿಪ್ರಾಯ ಸಂಗ್ರಹಿಸುತ್ತಿದ್ದವು. ಹೀಗೆ ಜನಾಭಿಪ್ರಾಯ ಸಂಗ್ರಹಿಸಲೆಂದು ಬಂದ ಸಂಸತ್ ಸದಸ್ಯೆಯರಲ್ಲಿ ಸಂಶೀಲಾ ಗೋಪಾಲನ್ ಮತ್ತು ಕನಕ ಮುಖರ್ಜಿ ಕೂಡ ಇದ್ದರು. ಅವರನ್ನು ಸಂಧಿಸುವ ಮತ್ತು ಅವರೊಂದಿಗೆ ನಿಕಟವಾಗಿ ಬೆರೆಯುವ ಅವಕಾಶದ ಭಾಗ್ಯ ಆಗ ನನಗೆ ಸಿಕ್ಕಿತ್ತು. ಅಶೋಕ ಹೋಟೆಲ್‌ನಲ್ಲಿ ತಂಗಿದ್ದ ಈ ಇಬ್ಬರು ಸಂಸತ್ ಸದಸ್ಯೆಯರನ್ನು ಭೇಟಿ ಮಾಡಲು ಹೋಗಿದ್ದ ನಾನು ಮತ್ತು ಗಾಯತ್ರಿದೇವಿಗೆ, ಅದು ಮೊದಲನೆಯ ಭೇಟಿಯಾದರೂ ಹಾಗೆಂದು ಅನಿಸದಂತೆ ಪ್ರೀತಿಯಿಂದ ನಮ್ಮೊಡನೆ ಬೆರೆತರು. ಬಲವಂತದಿಂದ ನಮಗೆ ತಿಂಡಿ ತಿನ್ನಿಸಿದರು ಮತ್ತು ಇತರ ರಾಜ್ಯಗಳ ಅವರ ಅನುಭವವನ್ನು ನಮ್ಮೊಡನೆ ಹಂಚಿಕೊಂಡರು. ಹೀಗೆ ಪರಿಚಯವಾದ ಅವರು ನ ಂತರ ನಾವು ಬೆಂಗಳೂರಿನಲ್ಲಿ ಆಯೋಜಿಸಿದ್ದ ಹಲವಾರು ಸಭೆಗಳಲ್ಲಿ ಭಾಷಣಕಾರರಾಗಿ ಭಾಗವಹಿಸಿದ್ದಾರೆ. ಅವರಲ್ಲಿ ಕನಕ ಮುಖರ್ಜಿ ಅತ್ಯಂತ ಮೆದುಮಾತಿನ ಸ್ವಾರಸ್ಯಕರ ಭಾಷಣಕಾರ್ತಿ. ಇಂಗ್ಲಿಷ್ ಅಧ್ಯಾಪಕರಾಗಿಯೂ ಕೆಲಸ ಮಾಡಿದ್ದ ಈ ಮಹಿಳಾ ನಾಯಕಿ ನಿಧಾನವಾಗಿ ಮಾತನಾಡಲು ಆರಂಭಿಸಿದರೆ ಭಾಷಣ ಎನ್ನುವುದಕ್ಕಿಂತ ಸಂಗೀತ ಕೇಳಿದಂತಿರುತ್ತಿತ್ತು. ಕಲ್ಕತ್ತೆಗೆ ಒಮ್ಮೆ ಹೋದಾಗ ಅವರನ್ನು ಭೇಟಿಯಾಗಿ ಅವರಿಂದ ಆತಿಥ್ಯವನ್ನು ಪಡೆದಿದ್ದೆ. ಈ ಹಿರಿಯ ಸಹೃದಯ ಜೀವಿ ಈ ತಿಂಗಳ ಒಂಬತ್ತರಂದು ಕೊನೆಯುಸಿರೆಳೆದರು. ಇವರ ಸಾವಿನಿಂದ ಭಾರತದ ಮಹಿಳಾ ಚಳುವಳಿಯ ಆದ್ಯರಲ್ಲೊಬ್ಬರ ನಿರ್ಗಮನವಾಯಿತೆಂದು ಮನಸ್ಸಿಗೆ ಖೇದವಾಯಿತು. ಅವರು ನಿಧನರಾದಾಗ ಅವರಿಗೆ 84 ವರ್ಷ ವಯಸ್ಸಾಗಿತ್ತು.

ಕನಕದಾಸಗುಪ್ತ ಹುಟ್ಟಿದ್ದು 1921ರ ಡಿಸೆಂಬರ್ 30ರಂದು. ಇಂದಿನ ಬಾಂಗ್ಲಾದೇಶದ ಜೆಸ್ಸೂರ್‌ನಲ್ಲಿ ಜನಿಸಿದ ಕನಕರ ತಂದೆ ಸತೀಶ್ ಚಂದ್ರದಾಸ್‌ಗುಪ್ತ ಮತ್ತು ತಾಯಿ ನಳಿನಿದೇವಿ. ಎರಡನೇ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡ ಕನಕ ಅಜ್ಜಿಯ ಮನೆಯಲ್ಲಿ ಪ್ರೀತಿಯ ಮಹಾಪೂರದಲ್ಲೇ ಬೆಳೆದರು. ಜೆಸ್ಸೂರಿನಲ್ಲೇ ಶಾಲಾ ವಿದ್ಯಾಭ್ಯಾಸ ನಡೆಯಿತು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಕನಕ ಸ್ವಾತಂತ್ರ್ಯ ಚಳುವಳಿಯ ಆಕರ್ಷಣೆಯ ಸೆಳೆತಕ್ಕೆ ಒಳಗಾದರು.

ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಸಾಗರದಲ್ಲಿ ಹಲವಾರು ತೊರೆಗಳು ಹರಿದು ಚಳುವಳಿಯನ್ನು ಗಟ್ಟಿಗೊಳಿಸಿದ್ದವು. ಕಾಂಗ್ರೆಸ್ ಪಕ್ಷದ ಸದಸ್ಯೆಯಾಗಿ ಕನಕದಾಸ್ ಗುಪ್ತ ಸೇರಿಕೊಂಡರೂ ಭೂಗತವಾಗಿ ನಡೆಯುತ್ತಿದ್ದ ಕಮ್ಯುನಿಸ್ಟ್ ಅಧ್ಯಯನ ತರಗತಿಗಳಿಗೂ ಹಾಜರಿ ಹಾಕುತ್ತಿದ್ದರು. ಅಲ್ಲಿಯೇ ಅವರು ಮಾರ್ಕ್ಸಿಸಂನ ಮೊದಲ ಪಾಠಗಳನ್ನು ಕಲಿತದ್ದು. ಆ ಕಾಲದಲ್ಲಿ ಯೌವನ ಮತ್ತು ದೇಶಪ್ರೇಮ - ಎರಡೂ ಒಟ್ಟೊಟ್ಟಿಗೆ ಸಾಗುತ್ತಿದ್ದ ಕಾಲವದು. ಕನಕದಾಸ ಗುಪ್ತರ ಸೋದರರು ಅನುಶೀಲನ ಮತ್ತು ಜುಗಂತರ್ ಮಾರ್ಗದ ಅನುಯಾಯಿಗಳಾಗಿದ್ದರು. ಅವರು ನಡೆಸುತ್ತಿದ್ದ ಸಭೆಗಳನ್ನು ಎಚ್ಚರಿಕೆಯಿಂದ ಕಾಯುವ ಕೆಲಸವನ್ನು ಕನಕದಾಸಗುಪ್ತಗೆ ಒಪ್ಪಿಸಿದ್ದರು. ಅವರ ಮನೆಯಲ್ಲಿ ಶಸ್ತ್ರಾಸ್ತ್ರಗಳನ್ನು ಅಡಗಿಸಿಡುತ್ತಿದ್ದರು. ಜೈಲಿನಲ್ಲಿ ಸತ್ತ ಜತಿನ್‌ದಾಸ್‌ನ ಸಾವು, ಗಾಂಧಿಯವರ ಉಪವಾಸ ಸತ್ಯಾಗ್ರಹ - ಇವೆಲ್ಲಾ ಎಳೆಯ ಕನಕಳ ಮೇಲೆ ಅಗಾಧ ಪರಿಣಾಮ ಬೀರಿತು. ಪ್ರೀತಿಲತಾ ವಾಡೇಕರ್, ಕಲ್ಪನಾ ಜೋಶಿ ಮುಂತಾದ ಎಳೆಯ ಕ್ರಾಂತಿಕಾರಿಗಳ ಹೋರಾಟದಿಂದ ಸ್ಫೂರ್ತಿಗೊಂಡ ಕನಕದಾಸ್ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸುವ ಮಹಾನ್ ಯಾಗದಲ್ಲಿ ಧುಮುಕಿದರು.

ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಕಮ್ಯೂನಿಸ್ಟ್ ವಿದ್ಯಾರ್ಥಿಗಳ ಸ್ನೇಹವನ್ನು ಕನಕದಾಸ್‌ಗುಪ್ತ ಬೆಳೆಸಿದ್ದರೂ ಅವರು ನೇರವಾಗಿ ಕಮ್ಯೂನಿಸ್ಟ್ ರಾಜಕೀಯಕ್ಕೆ ಧುಮುಕಿದ್ದು ವಿಶ್ವ

ವಿದ್ಯಾಲಯಕ್ಕೆ ಸೇರಿಕೊಂಡ ನಂತರವೇ. 1937ರಲ್ಲಿ ಕಲ್ಕತ್ತೆಯ ಬೆಥೂನೆ ಕಾಲೇಜಿಗೆ ಸೇರಿಕೊಂಡ ಕನಕದಾಸಗುಪ್ತ ಬಂಗಾಳ ಪ್ರಾಂತ್ಯದ ವಿದ್ಯಾರ್ಥಿ ಫೆಡರೇಷನ್‌ನ ಸದಸ್ಯೆಯಾಗಿ ಕ್ರಿಯಾಶೀಲವಾಗಿ ಭಾಗವಹಿಸಿದರು. 1939ರಲ್ಲಿ ಈ ಫೆಡರೇಷನ್ನಿನ ಮಹಿಳಾ ಘಟಕವನ್ನು ಆರಂಭಿಸಿ, ಅದರಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮಾಡಿದರು. 1939ರಲ್ಲಿ ನಡೆದ ಅಖಿಲ ಭಾರತ ವಿದ್ಯಾರ್ಥಿನಿಯರ ಸಮ್ಮೇಳನದಲ್ಲಿ ಕನಕದಾಸ್ ಗುಪ್ತ ಪ್ರಧಾನ ಕಾರ್ಯದರ್ಶಿನಿಯಾಗಿ ಚುನಾಯಿತರಾದರು. ಆ ಸಮ್ಮೇಳನದ ಮುಖ್ಯ ಅತಿಥಿಯಾಗಿ ಸರೋಜಿನಿ ನಾಯ್ಡು ಭಾಗವಹಿಸಿದ್ದರು. ಈ ಸಂಘಟನೆಯ ಅಧ್ಯಕ್ಷೆಯಾಗಿ ರೇಣುರಾಯ್ (ಚಕ್ರವರ್ತಿ) ಚುನಾಯಿತರಾಗಿದ್ದರು. ಈ ಸಮಾವೇಶದ ವೈಶಿಷ್ಟ್ಯವೆಂದರೆ ಇಲ್ಲಿ ಕೇವಲ ವಿದ್ಯಾರ್ಥಿನಿಯರ ಹಕ್ಕುಗಳು ಮಾತ್ರ ಚರ್ಚಿತವಾಗಲಿಲ್ಲ. ಬದಲಿಗೆ ವಿಚ್ಛೇದನದ ಹಕ್ಕು, ಬಹುಪತ್ನಿತ್ವ ನಿಷೇಧ, ಬಾಲಕಿಯರಿಗೆ ಉಚಿತ ಶಿಕ್ಷಣ, ಮುಂತಾದವುಗಳು ಚರ್ಚೆಗೆ ಒಳಗಾದವು. 1942, ಅಕ್ಟೋಬರಂ 15ರಂದು ಕನಕದಾಸ್ ಗುಪ್ತ ಅಂದಿನ ಕಮ್ಯೂನಿಸ್ಟ್ ನಾಯಕರಲ್ಲೊಬ್ಬರಾಗಿದ್ದ ಸರೋಜ್ ಮುಖರ್ಜಿಯವರನ್ನು ವಿವಾಹವಾದರು.

ಬಂಗಾಳದ ಚರಿತ್ರೆಯಲ್ಲಿ 'ಮಹಿಳಾ ಆತ್ಮ ರಕ್ಷಾ ಸಮಿತಿ'ಯ ಉದಯ ಒದು ಅಪೂರ್ವವಾದ ಮೈಲಿಗಲ್ಲು. 1943ರ ಮೇ 7-8ರಂದು ನಡೆದ ಸಮ್ಮೇಳನದಲ್ಲಿ ಆರಂಭವಾದ ಈ ಸಂಘಟನೆ ದೇಶದ ಹಲವಾರು ಮಹಿಳಾ ಹೋರಾಟಗಾರರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತು. ಆತ್ಮ ರಕ್ಷ ಸಮಿತಿಯ ಸದಸ್ಯೆಯರು 1943ರಲ್ಲಿ ಬಂಗಾಲವು ಎದುರಿಸಿದ ಮಹಾನ್ ಕ್ಷಾಮದಲ್ಲಿ ಕಂಗಾಲಾದವರಿಗೆ ಪುನರ್ವಸತಿಯನ್ನು ಕಲ್ಪಿಸುವ ಮಹಾನ್ ಕಾಯಕದಲ್ಲಿ ತೊಡಗಿಕೊಂಡರು.

1948ರಲ್ಲಿ ಸ್ವತಂತ್ರ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಬಹಿಷ್ಕೃತವಾದಾಗ ಕನಕ ಮುಖರ್ಜಿ ತುಂಬು ಗರ್ಭಿಣಿ. ಯಾರ ಸಹಾಯವೂ ಇಲ್ಲದೆ ಏಕಾಂಗಿಯಾಗಿ ಕಾಲ ಕಳೆದ ಅವರು ನಂತರದ ದಿನಗಳಲ್ಲಿ ಶಾಲಾ ಶಿಕ್ಷಕಿಯಾಗಿ ಕಾಲ ಕಳೆದರು. ಆದರೆ 1949ರಲ್ಲಿ ಉಳಿದ ಸಂಗಾತಿಗಳೊಂದಿಗೆ ಬಂಧನಕ್ಕೊಳಗಾಗಿ ಸೆರೆಮನೆ ವಾಸ ಅನುಭವಿಸಿದರು. ಅವರ ಪತಿ ಸರೋಜ್ ಮುಖರ್ಜಿಯವರೂ ಆ ವೇಳೆಗಾಗಲೇ ಸೆರೆಮನೆಯ ವಾಸ ಅನುಭವಿಸುತ್ತಿದ್ದರು.

ಭಾರತದ ಮಹಿಳಾ ಚಳುವಳಿಯ ಭಾಗವಾಗಿದ್ದುಕೊಂಡೇ ಅದರಲ್ಲಿದ್ದ ಎಡಚಿಂತಕರನ್ನು ಸಂಘಟಿಸುವ ಕಾಯಕದಲ್ಲಿ ಕನಕಮುಖರ್ಜಿ ನಿರತರಾದರು. ಅದರ ಫಲವೇ 1954ರಲ್ಲಿ ಜನ್ಮತಾಳಿದ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್. ಈ ಸಂಘಟನೆಯು ಅಂತರರಾಷ್ಟ್ರೀಯ ನೆಲೆಯ ವಿಮೆನ್ಸ್. ಇಂಟರ್ ನ್ಯಾಷನಲ್ ಡೆಮಾಕ್ರಟಿಕ್ ಫೆಡರೇಷನ್ ಅಂಗ ಸಂಸ್ಥೆಯಾಗಿಯು ಮಾನ್ಯತೆ ಪಡೆಯಿತು. ಈ ಸಂಘಟನೆಯ ಹುಟ್ಟಿಗೆ ಆತ್ಮ ರಕ್ಷಾ ಸಮಿತಿಯ ಚಟುವಟಿಕೆಗಳೇ ಪ್ರೇರಕವಾಗಿದ್ದವು.

1967 ಮತ್ತು 1969ರಲ್ಲಿ ಕನಕ ಮುಖರ್ಜಿ ಕಲ್ಕತ್ತೆಯ ಪುರಸಭಾಧ್ಯಕ್ಷೆಯಾಗಿಯೂ ಚುನಾಯಿತರಾದರು. ಈ ವೇಳೆಗಾಗಲೇ ಅವರು ಇಂಗ್ಲಿಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಕಾಲೇಜು ಶಿಕ್ಷಕಿಯಾಗಿದ್ದರು. 1975ರಲ್ಲಿ ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಿ ಹಲವಾರು ಪ್ರತಿಭಟನಾ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದ್ದರು. 1981ರಲ್ಲಿ ಆರಂಭವಾದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸ್ಥಾಪನೆಯ ಕಾರ್ಯದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿ ಅದರ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು.

ಪಶ್ಚಿಮ ಬಂಗಾಳದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಮತ್ತು ಕೇಂದ್ರ ಸಮಿತಿಯ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದ ಕನಕ ಮುಖರ್ಜಿ 1978 ರಿಂದ 1990ರ ವರೆಗೆ ರಾಜ್ಯಸಭೆಯ ಸದಸ್ಯೆಯಾಗಿಯೂ ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ಹಲವಾರು ಪಾರ್ಲಿಮೆಂಟರಿ ಸಮಿತಿಗಳ ಸದಸ್ಯೆಯಾಗಿ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನ ನಡೆಸಿ, ಪರಿಹಾರ ರೂಪಿಸುವಲ್ಲಿ ಕ್ರಿಯಾಶೀಲೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಆ ಸಂದರ್ಭದಲ್ಲಿಯೇ ಅವರು ಅತ್ಯಾಚಾರ ಕುರಿತ ಮಸೂದೆ ಮತ್ತು ವರದಕ್ಷಿಣೆಯನ್ನು ಕುರಿತ ಮಸೂದೆಗೆ ಸಂಬಂಧಪಟ್ಟ ಅಭಿಪ್ರಾಯ ಸಂಗ್ರಹಿಸಲು ಬೆಂಗಳೂರಿಗೆ ಬಂದಿದ್ದರು.

ಕನಕಮುಖರ್ಜಿ ಐವತ್ತು ವರ್ಷಗಳಿಗೂ ಮೀರಿದ ಅವಧಿಯಲ್ಲಿ ಕವಿಯಾಗಿ, ಅನುವಾದಕರಾಗಿ, ಬರಹಗಾರ್ತಿಯಾಗಿ ನಲವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. ಕವನ, ಸಣ್ಣಕಥೆ, ಕಾದಂಬರಿ, ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರನ್ನು ಕುರಿತ ಪುಸ್ತಕ ಮತ್ತು ಹಲವಾರು ಮಾರ್ಕ್ಸಿಸಂನ ಗ್ರಂಥಗಳನ್ನು ಬೆಂಗಾಲಿಗೆ ಅನುವಾದಿಸಿದ್ದಾರೆ. ಅವರ ಸಾಹಿತ್ಯಿಕ ಸಾಧನೆಗಾಗಿ ಕಲ್ಕತ್ತ ವಿಶ್ವವಿದ್ಯಾಲಯವು ಭೂಬನ ಮೋಹಿನಿ ದಾಸಿ ಚಿನ್ನದ ಪದಕ ನೀಡಿ ಸನ್ಮಾನಿಸಿದೆ.

1990ರಲ್ಲಿ ಜೀವನದ ಮತ್ತು ಸಾಮಾಜಿಕ ಹೋರಾಟದ ಸಂಗಾತಿಯಾಗಿದ್ದ ಪತಿ ಸರೋಜ ಮುಖರ್ಜಿಯವರನ್ನು ಕಳೆದುಕೊಂಡರು. ನಂತರದ ಹದಿನೈದು ವರ್ಷಗಳನ್ನು ಅವರು ಬಂಗಾಳದ ಗಣತಾಂತ್ರಿಕ್ ಮಹಿಳಾ ಸಂಘಟನೆಯ ಪ್ರಕಟಣೆಯಾದ 'ಏಕ್‌ಸಾಥ್' ಮಹಿಳಾ ಪತ್ರಿಕೆಯ ಕಾರ್ಯದಲ್ಲೇ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಇಂತಹ ಮಹಾನ್ ನಾಯಕಿ ಇಂದು ಕೇವಲ ನೆನಪು ಅಷ್ಟೆ. ದೇಶದ ಸ್ವಾತಂತ್ರ್ಯ ಚಳುವಳಿ ಮತ್ತು ಮಹಿಳಾ ಚಳುವಳಿಗೆ ಕನಕ್ ಮುಖರ್ಜಿಯವರು ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಅವರ ಶೋಕಕ್ಕೆ 'ಅಚಲ' ಕಂಬನಿ ಮಿಡಿಯುತ್ತದೆ.

-ಎನ್. ಗಾಯತ್ರಿ

ವಿಶ್ವ ಮಹಿಳಾ ದಿನಾಚರಣೆ

-ಹೆಚ್. ಎಸ್. ಗೀತಾ

ಮಾರ್ಚಿ ತಿಂಗಳು ಬಹಳ ಭರಭರಾಟೆಯ ತಿಂಗಳು. ಈ ತಿಂಗಳೆಂದರೆ ತೆರಿಗೆ ಪಾವತಿ - ಹಣಕಾಸಿಗೆ ಮಾತ್ರ ಸಂಬಂಧಿಸಿಲ್ಲ, ಮಹಿಳಾ ದಿನಾಚರಣೆಯೂ ಈ ತಿಂಗಳಿನಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಹೀಗಾಗಿ ಈ ತಿಂಗಳು ಪೂರ್ತಿ ಎಲ್ಲೆಲ್ಲೂ ಮಹಿಳಾ ದಿನಾಚರಣೆಯ ಸಂಭ್ರಮ.

ಬೆಂಗಳೂರಿನಲ್ಲಂತೂ ಇತ್ತೀಚೆಗೆ ಕರಕುಶಲ ವಸ್ತುಗಳು, ಛಾಯಾಚಿತ್ರ, ಚಿತ್ರಕಲೆ, ಶಿಲ್ಪಕಲೆ, ಆಹಾರ ತಿನಿಸುಗಳು - ಇತ್ಯಾದಿ ತರಹೇವಾರಿ ಪ್ರದರ್ಶನಗಳು, 'ಸೇಲ್'ಗಳು. ಒಟ್ಟಿನಲ್ಲಿ ನಗರದ ಒಂದೊಂದು ಮೂಲೆಯಲ್ಲೂ, ಒಂದೊಂದು ಪ್ರದರ್ಶನ, ಮಾರಾಟ. ಈ ಪೈಕಿ 'ವಿಶ್ವ ಮಹಿಳಾ ದಿನ'ಕ್ಕೆ ಸಂಬಂಧಿಸಿದಂತೆ ಮಾರ್ಚಿ 7, 8 ಮತ್ತು 9ರಂದು ಚಿತ್ರಕಲಾ ಪರಿಷತ್ತಿನಲ್ಲಿ ''ಸ್ತ್ರೀಲೋಕ' ಎಂಬ ಛಾಯಾಚಿತ್ರ ಪ್ರದರ್ಶನವಿತ್ತು.

ಹೆಸರೇ ಸೂಚಿಸುವಂತೆ ಮಹಿಳೆಯರಿಗೆ ಸಂಬಂಧಿಸಿದ ಚಿತ್ರಗಳೇ ಇದ್ದವು. ವಿವಿಧ ಸ್ತರಗಳು - ಕ್ಷೇತ್ರಗಳ ಮಹಿಳೆಯರನ್ನು ಬಿಂಬಿಸುವ ಚಿತ್ರಗಳೇ ಇಲ್ಲಿದ್ದವು. ಈಚೆಗೆ ಅತ್ಯಂತ ಮಾಮೂಲಾಗಿಬಿಟ್ಟಿರುವ ಥಳುಕು ಬಳುಕು ವೈಯ್ಯಾರಗಳ ಅರೆನಗ್ನ ಮಾಡೆಲ್‌ಗಳ ಚಿತ್ರಗಳು. ಇದಕ್ಕೆ ವಿಪರ್ಯಾಸವಾಗಿದ್ದ ಒಂದು ಚಿತ್ರ ಮನಕಲಕುವಂತಿತ್ತು. ಅರೆನಗ್ನ ಬಡವಿಯೊಬ್ಬಳು ರಸ್ತೆಯಲ್ಲಿ ಅನಾಥಳಾಗಿ ಬಿದ್ದಿದ್ದಾಳೆ. ಅವಳ ಕೂಸು ಕಾಲ ಬಳಿ ಕುಳಿತು ಹೊಯ್ದಾಡುತ್ತಿದೆ. (ವಾಸ್ತವದಲ್ಲಿ ಅವಳು ಅಪಸ್ಮಾರ ಪೀಡಿತಳಾಗಿ ಬಿದ್ದಿದ್ದಳಂತೆ).

ಈ ಪ್ರದರ್ಶನದಲ್ಲಿ ಗಮನ ಸೆಳೆದ ಮತ್ತೊಂದು ಚಿತ್ರವೆಂದರೆ ಮಜಲ್ ಮ್ಯಾನ್‌ನ ಪ್ರತಿಮೆಯೊಂದಕ್ಕೆ ಬಹಳ ತನ್ಮಯತೆಯಿಂದ ಕುಂಚದಿಂದ ಬಣ್ಣ ಬಳಿಯುತ್ತಿದ್ದ ಒಬ್ಬ ಅಲೆಮಾರಿ ಮಹಿಳೆ. ಈ ಚಿತ್ರ ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂದು ಹೇಳುತ್ತಿತ್ತು.

ಉಳಿದಂತೆ, ಅಂಧನ ಕೈಹಿಡಿದು ಕರೆದೊಯ್ಯುತ್ತಿದ್ದ ಬಿಳಿ ಕೋಟಿನ ಹುಡುಗಿ, ಬೆಂಗಳೂರಿನಲ್ಲಿ ವಿಶ್ವಸುಂದರಿ ಸ್ಪರ್ಧೆಯ ಸಮಯದಲ್ಲಿನಡೆದ ಪ್ರತಿಭಟನಾ ಸಮಯದಲ್ಲಿ ಮಹಿಳಾ ಪ್ರದರ್ಶನಕಾರರನ್ನು ಮಹಿಳಾ ಪೋಲಿಸರು ಥಳಿಸುತ್ತಿರುವುದು, ವಿದೇಶೀ ಬೀಜ ಕಂಪನಿಗಳ ವಿರುದ್ಧ ಮಹಿಳೆಯರ ಚಳುವಳಿ ಇತ್ಯಾದಿ ಚಿತ್ರಗಳು ಗಮನ ಸೆಳೆದವು. ಚಿಳ್ಳೆಪಿಳ್ಳೆಗಳನ್ನು ತಳ್ಳುಗಾಡಿಯಲ್ಲಿ ಕೂರಿಸಿ ನೂಕುತ್ತಿದ್ದ ಮಹಿಳೆ, ನೀರು ತುಂಬಿರುವ ರಸ್ತೆಯಲ್ಲಿ ದ್ವಿಚಕ್ರ ವಾಹನವನ್ನು ಮಕ್ಕಳೊಡನೆ ತಳ್ಳಿಕೊಂಡು ಹೋಗುತ್ತಿರುವ ಮಹಿಳೆ - ಇವೆಲ್ಲ ವಿಶೇಷ ಗಮನ ಸೆಳೆದವು.

ಶಾಂತಿ ಮನೆಗೆಸಲ ಮಾಡುವಾಕೆ. ನಿಮ್ಮ ಬಿಲ್ಡಿಂಗಿನಲ್ಲಿ ಬಹುತೇಕ ಮನೆಗಳಲ್ಲಿ ಕೆಲಸ ಮಾಡುತ್ತಾಳೆ. ನಮ್ಮ ಮನೆಯಲ್ಲಿ ಮಾಡದಿದ್ದರೂ ದಿನಕ್ಕೊಮ್ಮೆ ಬಂದು ಹಾಜರಿ ಹಾಕುತ್ತಾಳೆ. ತನ್ನ ಕಷ್ಟನಷ್ಟ ಸುಖ ದುಃಖಗಳನ್ನು ನನ್ನ ಬಳಿ ತೋಡಿಕೊಳ್ಳುತ್ತಾಳೆ. ''ಕೆಲ್ಸ ಮಾಡೋವ್ರ ಮನೇಲಿ ಏನೂ ಹೇಳಿಕೊಳ್ಳಬಾರದು ಅಕ್ಕಾ, ನಮಗೆ ಆಗ ಏನೂ ವ್ಯಾಲ್ಯೂ ಇರಲ್ಲ'' ಅಂತಾಳೆ.

ಶಾಂತಿ ತಮಿಳು ಮೂಲದವಳು. ಆದರೆ ಬಹಳ ಸೊಗಸಾಗಿ ಕನ್ನಡ ಮಾತನಾಡುತ್ತಾಳೆ. ಅಷ್ಟೇ ಚೆನ್ನಾಗಿ ಇಂಗ್ಲೀಷ್, ಹಿಂದಿ, ತೆಲುಗು ಮತ್ತು ಮಲಯಾಳಂ ಗೊತ್ತಿದೆ ಎನ್ನುವುದನ್ನು ರಹಸ್ಯವಾಗಿರಿಸಿದ್ದಾಳೆ. ಸುತ್ತಮುತ್ತಲಿನ ಆಗುಹೋಗುಗಳ ವರದಿ ಒಪ್ಪಿಸುತ್ತಾಳೆ. ಅವಳು ನನ್ನ ಮಟ್ಟಿಗೆ ಒಂದು ರೀತಿಯ ಮೌಖಿಕ ಪತ್ರಿಕೆ.

ಶಾಂತಿಗೆ ಓದಿಲ್ಲ, ಬರೆಹವಿಲ್ಲ. ಆದರೆ ಕಲಿತವರನ್ನು ನಾಚಿಸುವಂತೆ ಮಾತನಾಡುತ್ತಾಳೆ. ಮಾತನಾಡುವಾಗ ಅವಳೊಬ್ಬಳು ವೇದಾಂತಿ, ನ್ಯಾಯವಾದಿ, ಪ್ರಾಕ್ಟಿಕಲ್ ಮಹಿಳೆ. 'ನೀನು ಓದಿರಬೇಕಾಗಿತ್ತು' ಅಂದರೆ, 'ಆಗ ನಾನು ಖಂಡಿತಾ ಲಾಯರ್ ಆಗ್ತಿದ್ದೆ' ಎಂದು ಹೆಮ್ಮೆಯಿಂದ ಹೇಳುತ್ತಾಳೆ. ಹಾಗೆಯೇ ನೈತಿಕತೆಯ ಬಗ್ಗೆ ಮಾತನಾಡುತ್ತಾಳೆ. ಕೆಲವು ತಿಂಗಳುಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡ ನಫೀಸಾ ಜೋಸೆಫ್ ಬಗ್ಗೆಯೂ ಹೇಳುತ್ತಾಳೆ. ಆ ಸಮಯದಲ್ಲಿ ಅವಳ ಮಾನಸಿಕ ತುಮುಲಗಳೇನಿದ್ದಿರಬಹುದು ಎಂದು ಊಹಿಸುತ್ತಾಳೆ.

ಈಚೆಗೆ ಶಾಂತಿಯ ಗಂಡ ಏನೂ ತಪ್ಪಿಲ್ಲದಿದ್ದರೂ ದಡ್ಡತನದಿಂದಾಗಿ ಪೋಲೀಸ್ ಲಾಕಪ್‌ಗೆ ಹೋಗಬೇಕಾಯಿತು. ಒಂದು ಕಾಸೂ ಕೊಡದೆ ಹರಸಾಹಸ ಮಾಡಿ ಅವನನ್ನು ಬಿಡಿಸಿಕೊಂಡು ಬಂದ ಶಾಂತಿ ಹೇಳುತ್ತಾಳೆ - ''ಸಧ್ಯ, ಅವನ್ನ ಅರೆಸ್ಟ್ ಮಾಡಿದ್ರಲ್ಲಾ ಅಕ್ಕ. ನಾನಾಗೋ ಹೊತ್ತಿಗೆ ಬಿಡಿಸ್ಕೊಂಡು ಬಂದೆ. ನನ್ನೇ ಅರೆಸ್ಟ್ ಮಾಡಿದ್ದಿದ್ರೆ, ಅವನು ನನ್ನನ್ನ ಬಿಡಿಸೋಕೆ ಆಗದೆ ಸುಮ್ನೆ ಇದ್ದು ಬಿಡೋನು !''. ಇಂತಹ ಶಾಂತಿ ಮಹಿಳಾ ದಿನದಂದು ಸ್ವಲ್ಪ ಟ್ರಿಮ್ ಆಗಿ ಬಂದಿದ್ದಳು. ಪ್ರಶ್ನಾರ್ಥಕವಾಗಿ ನೋಡಿದ್ದಕ್ಕೆ ''ಇವತ್ತೇನೋ ಮಹಿಳಾ ದಿನವಂತೆ ಅಕ್ಕ. ಅದಕ್ಕೆ ವಿಷ್ ಮಾಡಕ್ಕೆ ಬಂದಿದೀನಿ'' ಅಂದಳು.

ಅಂದು ಬಿಲ್ಡಿಂಗ್ ಇಳಿದು ಹೊರಹೋಗುತ್ತಿದ್ದಾಗ ಎಲ್ಲರ ಮನೆ ಮುಂದೆ ವಿಶೇಷ ರಂಗೋಲಿ ಚಿತ್ತಾರ ಕಂಗೊಳಿಸುತ್ತಿತ್ತು. ಬಿಳಿಯ ರಂಗೋಲಿ ವಿನ್ಯಾಸಗಳಿಗೆ ಕೆಮ್ಮಣ್ಣಿನ ಹೊರ ಆವರಣ. ಅವೆಲ್ಲಾ ಶಾಂತಿ ಬಿಡಿಸಿದ್ದ ವಿಮೆನ್ಸ್ ಡೇ ಸ್ಪೆಷಲ್ ರಂಗೋಲಿ.

ಸಭೆ ಸಮಾರಂಭಗಳಲ್ಲಿ ಕೈಗಾರಿಕೋದ್ಯಮಿಗಳು, ರಾಜಕೀಯ ಪ್ರಭುಗಳು ಇವೆಲ್ಲಾ ಸಾಮಾನ್ಯವೇ - ದಿನನಿತ್ಯ ಪತ್ರಿಕೆಗಳಲ್ಲಿ ಬರುವಂತಹವೇ. ಆದರೂ, ಈ ಪೈಕಿ ಸೋನಿಯಾಗಾಂಧಿ ಮತ್ತು ಗುಲಾಂನಬಿ ಆಜಾದರ ಚಿತ್ರ ಕನ್ನಡದ ಒಂದು ಪ್ರಸಿದ್ಧ ಶಿಶು ಗೀತೆಯ ಮೊದಲ ಸಾಲನ್ನು ನೆನಪಿಗೆ ತರಿಸುವಂತಿತ್ತು.

ನಮ್ಮದೇ ರೈಲುನಿಲ್ದಾಣದಲ್ಲಿ ವಿದೇಶಿ ಮಹಿಳೆಯೊಬ್ಬಳು ಏನನ್ನೋ ಮಾರುತ್ತಿರುವ ಚಿತ್ರವೊಂದಿತ್ತು. ಮೇಲ್ನೋಟಕ್ಕೆ 'ವಿಶೇಷ' ಎಂದೇನೂ ಅನಿಸದಿದ್ದರೂ, ಅದರ ಹಿನ್ನೆಲೆ ಮಾತ್ರ ಸ್ವಾರಸ್ಯಪೂರ್ಣವಾಗಿದೆ. ಆ ಮಹಿಳೆ ಭಾರತಕ್ಕೆ ಪ್ರವಾಸಿಯಾಗಿ ಬಂದಿದ್ದಾಳೆ. ದೇಶ ಸುತ್ತಬೇಕು. ಅದಕ್ಕೆ ಹಣವೂ ಬೇಕು. ಅದಕ್ಕಾಗಿ ಪ್ಲಾಟ್‌ಫಾರಂನಲ್ಲಿ ಬ್ರೆಡ್, ಕ್ಷಮಿಸಿ - ಸ್ಯಾಂಡ್‌ವಿಚ್ ಮಾರುತ್ತಿದ್ದಾಳೆ. ಜನರೂ ಮುಗಿಬಿದ್ದು ಕೊಳ್ಳುತ್ತಿದ್ದರಂತೆ. ದರವೂ ಹೆಚ್ಚೇನಿರಲಿಲ್ಲವಂತೆ - ಎರಡು ಬ್ರೆಡ್ ತುಣುಕಿಗೆ 10 ರೂ.ಗಳು.

ಈ ಪ್ರದರ್ಶನದಲ್ಲಿ ಸ್ತ್ರೀ ಭ್ರೂಣಹತ್ಯೆಯ ಬಗ್ಗೆ ಪ್ರತಿಭಟನೆ ನಡೆಸುತ್ತಿರುವ ಖ್ಯಾತನಾಮರುಗಳ ಚಿತ್ರವೊಂದಿತ್ತು. ಆದರೆ ಅದನ್ನು ಅಣಕಿಸುವಂತೆ, ನೆನಪಿನಲ್ಲಿ ಉಳಿಯುವ, ಕಾಡುವ ಮತ್ತೂ ಒಂದು ಚಿತ್ರವಿತ್ತು. "ಕಸದ ತೊಟ್ಟಿಯೊಂದರಲ್ಲಿ ನವಜಾತ ಹೆಣ್ಣುಕೂಸಿನ ಶವ - ಅದನ್ನು ನೋಡುತ್ತಾ ನಿಂತ ಜನ".

ಇದು ಎಸ್. ಈಶ್ವರ್‌ರವರ ಚಿತ್ರಗಳ ಪ್ರದರ್ಶನ. ಇಲ್ಲಿ ಸುಮಾರು 70 ಚಿತ್ರಗಳಿದ್ದವು. ಇವರು ವೃತ್ತಿಯಿಂದ ಛಾಯಾಗ್ರಾಹಕರೇ, ಪತ್ರಿಕಾ ಬಳಗದಲ್ಲೇ ಕೆಲಸ. ಅಂದ ಮೇಲೆ ಕೇಳಬೇಕೆ? ನಿರಾಯಾಸವಾಗಿ ಚಿತ್ರಗಳನ್ನು ಚೆನ್ನಾಗಿ ಸೆರೆಹಿಡಿದಿದ್ದಾರೆ.

ಮಹಿಳಾ ದಿನಾಚರಣೆಯನ್ನು ಕ್ರಮೇಣವಾಗಿ ವ್ಯಾಪಕವಾಗಿ ಎಲ್ಲೆಡೆ ಆಚರಿಸಲಾಗುತ್ತಿದೆ. ಅವರವರಿಗೆ ತೋಚಿದಂತೆ, ಅವರವರ ಮಟ್ಟದಲ್ಲಿ ಜನ ಆಚರಿಸುತ್ತಿದ್ದಾರೆ. ರೇಡಿಯೋ, ಟೀವಿ, ಮೊಬೈಲುಗಳ ಮೂಲಕ ಶುಭಾಶಯಗಳನ್ನು ಕೋರಿದ್ದೇ ಕೋರಿದ್ದು. ಕೆಲವು ಅಂಗಡಿಗಳಲ್ಲಿ ಮಹಿಳೆಯರಿಗೆ ವಿಶೇಷ ಉಡುಗೊರೆಗಳನ್ನು ಕೊಟ್ಟರು. ಕೆಲವೆಡೆ ಮಹಿಳೆಯರಿಗೆ ಸಂಬಂಧಿಸಿದ ಗಂಭೀರ ವಿಷಯಗಳ ಬಗ್ಗೆ ಚರ್ಚಾಗೋಷ್ಠಿ ಸೆಮಿನಾರು ಇತ್ಯಾದಿ. ಮತ್ತೆ ಕೆಲವೆಡೆ ಅಷ್ಟೇ ಗಂಭೀರವಾದ ಕಿಟ್ಟಿ ಪಾರ್ಟಿಗಳು ನಡೆದವು. ಕೆಲ ಹೆಂಗಳೆಯರು ಅಡಿಗೆಮನೆಗೆ ರಜಾ ಘೋಷಿಸಿ ಸಿನಿಮಾ, ಹೋಟೆಲ್‌ಗೆ ಹೋಗಿ ಆನಂದಿಸಿದರೆ, ಕೆಲವರು ಮನೆ ಮನೆಗಳಲ್ಲಿಯೇ ಗುಂಪುಗೂಡಿ ವಿನೋದದಿಂದ ಕಾಲ ಕಳೆದರು. 70ರ ಹರೆಯದವರು ಸುಂದರವಾಗಿ ನಗುತ್ತಾ ಕ್ಯಾಟ್‌ವಾಕ್ ಮಾಡಿ ರಂಜಸಿದರು. ಈ ಟೀವಿ ಕನ್ನಡ ಪರಿಪೂರ್ಣ ಮಹಿಳೆಯನ್ನೇ ಆಯ್ಕೆ ಮಾಡಿ ಸನ್ಮಾನಿಸಿತು.

ಭ್ರೂಣಗಳು

ಕಣ್ಣು-ಮೂಗು-ಬಾಯಿ
ಇನ್ನೂ ಕೈಕಾಲು ಮೂಡಿರದ
ಜೀವ ಧಾತುವಿನ ಮಿಸುಕಾಟ
ಹೊಯ್ದಾಡುವ ಭ್ರೂಣ
ಗರ್ಭದಲ್ಲಿ ಮಿಸುಕಾಡುವ
ಜೀವದ್ರವದ ಎದೆಬಡಿತ
ಮೂಡುತ್ತಿರುವ ಜೀವದ
ಲಿಂಗ ಪತ್ತೆ ಮಾಡಿದ ಮನುಜ
ನಿರ್ದಾಕ್ಷಿಣ್ಯದ ವಿಜ್ಞಾನದ ಕತ್ತರಿ ಹಿಡಿದು
ಹೆಣ್ಣು ಭ್ರೂಣಗಳಿಗೆ ನಿಷೇಧ ಹೇರಿ
ಮೃತ್ಯುಕೂಪಕೆ ಹಸಿಹಸಿ
ಜೀವದ್ರವ ಚೆಲ್ಲಿದರೇನು ?
ಹಸಿ ಮಾಂಸದ ಮುದ್ದೆಗೆ
ಮಚ್ಚು ಕೊಚ್ಚಿ ಹಾಕಿದರೇನು ?
ಗುಬ್ಬಿ ಗೂಡಿನಲಿ ಸೇರಿದ
ವಿಷ ಸರ್ಪ ಹೆಡೆಬಿಚ್ಚಿ
ಕೂಡಿಟ್ಟ ಮೊಟ್ಟೆಗಳನ್ನು
ನುಂಗಿ ತೇಗಿದರೇನು ?
ಹಲ್ಲು ಕೀಳುವ ವಾರಸುದಾರರು
ಹುಟ್ಟಿ ಬರುತ್ತಾರೆ ಮುಂದೆ
ಸಾಯಿಸಿದ ಹೆಣ್ಣು ಭ್ರೂಣಗಳ
ಲೆಕ್ಕ ಕೇಳುತ್ತಾರೆ ಅವರು
ನಿಷೇಧಗಳ ಲಕ್ಷ್ಮಣರೇಖೆಗಳನು
ಕಿತ್ತು ಹಾಕುತ್ತಾರೆ ಅವರು.

ಕೆ. ಷರೀಫಾ

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ.

- ಯಾವುದೇ ಜ್ವರ ಮಲೇರಿಯ ಇರಬಹುದು. ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
- ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
- ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
- ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
- ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
- ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
- ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
- ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
- ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ - ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ.

ಸ್ತ್ರೀಭ್ರೂಣ ಹತ್ಯೆ ಮತ್ತು ತಂತ್ರಜ್ಞಾನ

– ನೇಮಿಚಂದ್ರ

ಯಾವುದೇ ವಿಜ್ಞಾನ, ತಂತ್ರಜ್ಞಾನ ತನ್ನಲ್ಲಿ ಅಪಾರ ಶಕ್ತಿಯನ್ನು, ಸಾಧ್ಯತೆಗಳನ್ನು ಅಡಗಿಸಿಕೊಂಡಿರುತ್ತದೆ. ಅದರ ಉಪಯೋಗ, ದುರುಪಯೋಗ ಎರಡರ ಸಾಧ್ಯತೆಯೂ ಸಮಾಜದ ಮೇಲೆ ತೀವ್ರ ಪರಿಣಾಮವನ್ನು ಬೀರಬಲ್ಲದು. ಸದುದ್ದೇಶ ಪ್ರೇರಿತವಾದ ವೈಜ್ಞಾನಿಕ ಸಂಶೋಧನೆಗಳೂ ದುರ್ಬಳಕೆಯಾಗಬಲ್ಲವು ಎನ್ನುವುದಕ್ಕೆ ಭ್ರೂಣ ಲಿಂಗ ಪತ್ತೆಗೆ ಕಂಡು ಹಿಡಿದ ತಂತ್ರಜ್ಞಾನಗಳೇ ಸಾಕ್ಷಿಯಾಗಿವೆ. ಮಾನವೀಯತೆ ಇಲ್ಲದ ವಿಜ್ಞಾನ ತಂತ್ರಜ್ಞಾನ ಅತ್ಯಂತ ಅಪಾಯಕಾರಿ. ಇಂದಿನ ಕೊಳ್ಳುಬಾಕ ಸಂಸ್ಕೃತಿಯಲ್ಲಿ, ಲಾಭಕೋರತನವೇ ಮೂಲಮಂತ್ರವಾದ ಪರಿಸರದಲ್ಲಿ ಮಾನವತಾವಾದಿ ವಿಜ್ಞಾನಿಗಳು ಸಿಗುವುದು ಅಪರೂಪವಾಗಿದೆ. ಹಾಗೆಂದೇ ಜೀವ ಉಳಿಸುವ ಶರತ್ತು ತೆಗೆದುಕೊಂಡ ವೈದ್ಯರು, ತಂತ್ರಜ್ಞರು ಹಣದ ದುರಾಸೆಯಲ್ಲಿ ಸ್ತ್ರೀಭ್ರೂಣ ಹತ್ಯೆಯಲ್ಲಿ ಭಾಗಿಯಾಗುತ್ತಿದ್ದಾರೆ. ಲಾಭವೇ ಉದ್ದೇಶವಾಗಿ, ಮುಂದುವರೆದ ದೇಶಗಳು 'ಗಂಡು' ಹುಟ್ಟಿಸುವ ತಂತ್ರಜ್ಞಾನದತ್ತ ಭರದಿಂದ ಸಂಶೋಧನೆ ನಡೆಸುತ್ತಿವೆ.

ತಂತ್ರಜ್ಞಾನದ ದುರ್ಬಳಕೆ

ವಿಜ್ಞಾನ ರಂಗಕ್ಕೂ ಸ್ತ್ರೀವಾದಿ ದೃಷ್ಟಿಕೋನ ಮತ್ತು ಲಿಂಗ ಸೂಕ್ಷ್ಮತೆಯ ಅಗತ್ಯವಿದೆ. ವಿಜ್ಞಾನ-ತಂತ್ರಜ್ಞಾನ ಬಳಕೆಯಾಗುತ್ತಿರುವ ರೀತಿ, ಎಂಥಾ ತಂತ್ರಜ್ಞಾನ ನಮಗೆ ಬೇಕು, ಪುರುಷರಿಗೆ ಅನುಕೂಲಕರವಾದ ತಂತ್ರಜ್ಞಾನ ಮಹಿಳೆಯರಿಗೆ ಅನುಕೂಲವಿದೆಯೇ, ತಂತ್ರಜ್ಞಾನದಿಂದ ಮಹಿಳೆಯರ ಜೀವನದ ಮೇಲಾಗುತ್ತಿರುವ ಪ್ರಭಾವ, ತನ್ನ ಬದುಕಿಗೆ ಮಾರಕವಾದ ತಂತ್ರಜ್ಞಾನವನ್ನು ಮಹಿಳೆ ನಿಯಂತ್ರಿಸುವ ಬಗೆ - ಇವೆಲ್ಲವುಗಳತ್ತ ಅಗಾಧ ಚಿಂತನೆಯ ಅಗತ್ಯವಿದೆ.

ಕಾರಣ, ನಿರ್ಲಿಪ್ತ ಎನ್ನುವ ವಿಜ್ಞಾನ ಕೂಡಾ ಸಾಮಾಜಿಕ ಅಗತ್ಯಗಳ, ನಂಬಿಕೆಗಳ ದಿಕ್ಕಿನಲ್ಲಿಯೇ ಬೆಳೆಯುತ್ತದೆ. ಸಾಮಾಜಿಕ ಅಂಶಗಳು ವಿಜ್ಞಾನ-ತಂತ್ರಜ್ಞಾನದ ಹಾದಿಯನ್ನು ರೂಪಿಸುತ್ತವೆ. ಪಿತೃಪ್ರಧಾನ ಸಮಾಜದಲ್ಲಿ ವಿಜ್ಞಾನದ ಅಳವಡಿಕೆಗಳು ಮಹಿಳಾ ಶೋಷಣೆಯ ಅಸ್ತ್ರವಾಗಬಲ್ಲವು. ಕೊಳ್ಳುಬಾಕ, ಲಾಭಕೋರಕ ಸಮಾಜಗಳು ಮಾನವೀಯತೆನ್ನು ಮರೆತು, ತಂತ್ರಜ್ಞಾನದ ನೇರ ದುರುಪಯೋಗಕ್ಕೆ ಕಾರಣವಾಗುತ್ತವೆ.

ಭಾರತದಲ್ಲಿ 1975ರಲ್ಲಿ 'ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್' ಮೂಲಕ 'ಆಮ್ನಿಯೋಸಿಂಟೆಸಿಸ್' ಪರಿಚಯವಾಯಿತು. ವೈದ್ಯರು ಗರ್ಭವತಿ ಮಹಿಳೆಯ ಹೊಟ್ಟೆಗೆ ಒಂದು ಉದ್ದನೆಯ ಟೊಳ್ಳಾದ ಸೂಚಿಯನ್ನು ಚುಚ್ಚಿ ಆಕೆಯ ಗರ್ಭಕೋಶದ ಒಳಗೆ, ಭ್ರೂಣದ ಸುತ್ತಲು ಇರುವ ಆಮ್ನಿಯಾಟಿಕ್ ದ್ರವವನ್ನು ಹೊರಗೆ ತೆಗೆದು, ಅದನ್ನು ಪರಿಶೀಲಿಸುವ ಕ್ರಮ ಇದು. ಇದರಿಂದ ಭ್ರೂಣಕ್ಕೆ ಸೋಂಕು ತಾಗುವ, ಗಾಯವಾಗುವ ಸ್ವಲ್ಪ ಮಟ್ಟಿನ ಸಾಧ್ಯತೆಯೂ ಇತ್ತು. ಭ್ರೂಣಾವಸ್ಥೆಯಲ್ಲಿ ವಂಶವಾಹಿಯಲ್ಲಿಯ ಕೊರತೆಗಳನ್ನು, ನ್ಯೂನತೆಗಳನ್ನು ಅನುವಂಶಿಕ ರೋಗಗಳನ್ನು ಪತ್ತೆ ಮಾಡಲು ಬಂದ 'ಆಮ್ನಿಯೋ ಸಿಂಟೆಸಿಸ್' ತಂತ್ರ, ಬಲು ಶೀಘ್ರವಾಗಿ ಕೇವಲ ಭ್ರೂಣ ಲಿಂಗ ಪತ್ತೆಗೆ, ತದನಂತರದ ಹೆಣ್ಣು ಭ್ರೂಣ ಹತ್ಯೆಗೆ ದುರ್ಬಳಕೆಯಾಯಿತು.

ಎಪ್ಪತ್ತರ ದಶಕದ ಕೊನೆಯಲ್ಲಿ ಜನಸಾಮಾನ್ಯರಿಗೆ ಲಭ್ಯವಾದ ಈ ತಂತ್ರಜ್ಞಾನ, ಕೇವಲ ಐದು ವರ್ಷಗಳಲ್ಲಿ (1978 ರಿಂದ 1983) 78,000 ಸ್ತ್ರೀ ಭ್ರೂಣಗಳ ಹತ್ಯೆಗೆ ಕಾರಣವಾಯಿತು. ಇದೇ ಅವಧಿಯಲ್ಲಿ ಪ್ರತಿವರ್ಷವೂ ಹುಟ್ಟಿದ ಹನ್ನೆರಡು ಮಿಲಿಯ ಹೆಣ್ಣು ಮಕ್ಕಳಲ್ಲಿ, ಹದಿನೈದರ ವಯಸ್ಸನ್ನು ಮುಟ್ಟಿದ್ದು ಕೇವಲ ಒಂಬತ್ತು ಮಿಲಿಯ ಹೆಣ್ಣು ಮಕ್ಕಳು. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶುವಿನ ಹತ್ಯೆ, ಹೆಣ್ಣು ಮಗುವಿನತ್ತ ನಿರ್ಲಕ್ಷ್ಯ, ಇವೆಲ್ಲವೂ ಈ ಆಘಾತಕಾರಿ ಅಂಕಿಸಂಖ್ಯೆಗಳಿಗೆ ಕಾರಣ.

ನಂತರ ಆಮ್ನಿಯೋಸಿಂಟೆಸಿಸ್ ಅನ್ನು ಅನುವಂಶಿಕವಾಗಿ ಬರುವ ರೋಗಗಳ ಕೇಸುಗಳಲ್ಲಿ ಮಾತ್ರ ಬಳಸಬೇಕೆಂಬ ನಿಯಮವನ್ನು ತಂದರೂ, ಇದು ಕೇವಲ ಸರಕಾರಿ ಸಂಸ್ಥೆಗಳಿಗೆ ಅನ್ವಯವಾಗಿತ್ತು. ಈ ತಾಂತ್ರಿಕತೆಯನ್ನು ಲಾಭಕೋರತನಕ್ಕೆ ಬಳಸಿಕೊಳ್ಳಲು ಖಾಸಗಿ ಕ್ಲಿನಿಕ್‌ಗಳು ರಾತ್ರೋರಾತ್ರಿ ಮೊಳಕೆ ಒಡೆದವು. ವಿಪರ್ಯಾಸವೆಂದರೆ, ಕುಡಿಯುವ ನೀರಿನಂತಹ ಮೂಲಭೂತ ಅಗತ್ಯವೂ ಇಲ್ಲದ ತಾಣಗಳಲ್ಲೂ ಆಮ್ನಿಯೋಸಿಂಟೆಸಿಸ್ ಕೇಂದ್ರಗಳು ಬಾಗಿಲು ತೆರೆದು ಕುಳಿತವು. ರೈತರು ದುಬಾರಿ ಬಡ್ಡಿದರದಲ್ಲಿ ಸಾಲ ತೆಗೆದುಕೊಂಡು ಈ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದರು. ಇಂದು ಐನೂರು ಕೊಟ್ಟು ನಾಳೆ ಐದು ಸಾವಿರ ಉಳಿಸಿ ಎಂದು ನಿರ್ಲಜ್ಜೆಯಿಂದ ಘೋಷಿಸಿದ ಜಾಹಿರಾತುಗಳು ಅಬ್ಬರಿಸಿದ್ದು ಇದೇ ಅವಧಿಯಲ್ಲಿ.

ಎಂಬತ್ತು ಮತ್ತು ತೊಂಬತ್ತರ ದಶಕಗಳಲ್ಲಿ, ವೈದ್ಯ, ತಂತ್ರಜ್ಞಾನದ ಅಭಿವೃದ್ಧಿಗಳು ಭ್ರೂಣ ಲಿಂಗ ಪತ್ತೆಯ ತಾಂತ್ರಿಕತೆಯನ್ನು ಸುಲಭವಾಗಿಸಿದವು. ತೊಂಬತ್ತರ ದಶಕದ ಆರಂಭದಿಂದ ಭ್ರೂಣಲಿಂಗ ಪತ್ತೆಗೆ 'ಅಲ್ಟ್ರಾ ಸೋನೋಗ್ರಫಿ' ಅತ್ಯಧಿಕವಾಗಿ

ಉಪಯೋಗಿಸುತ್ತಿರುವ ತಂತ್ರಜ್ಞಾನವಾಗಿದೆ. ಮುಖ್ಯವಾಗಿ ಚುಚ್ಚದೆ ಕೊಯ್ಯದೆ ಲಿಂಗಪತ್ತೆ ಮಾಡಬಹುದಾದ ಈ ಸುಲಭ ತಂತ್ರಕ್ಕೆ, ಪ್ರಯೋಗಶಾಲೆಯ ಅಗತ್ಯವೇ ಇಲ್ಲ. ಈ ತಂತ್ರಜ್ಞಾನ, ಮೂತ್ರಪಿಂಡದಲ್ಲಿಯ ಕಲ್ಲು ಮುಂತಾದ ರೋಗಗಳ ಪತ್ತೆಗೆ ಬಲು ಉಪಯೋಗಿ. ಆದರೆ ಇದನ್ನು ಇಂದು ಯಥೇಚ್ಛವಾಗಿ ಬಳಸುತ್ತಿರುವುದು, ಗರ್ಭದಲ್ಲಿರುವ ಭ್ರೂಣದಲ್ಲಿರುವ ಲಿಂಗಪತ್ತೆಗೆ.

1991ರ ಆರ್ಥಿಕ ಉದಾರೀಕರಣದ ನೀತಿ, ಭಾರತದ 'ಆಲ್ಟ್ರಾಸೌಂಡ್' ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪನಿಗಳು ಲಗ್ಗೆ ಇಡಲು ಕಾರಣವಾಯಿತು. ಇಂದು ಅನೇಕ ಕಂಪನಿಗಳು ಆಲ್ಟ್ರಾಸೌಂಡ್ ಯಂತ್ರವನ್ನು ಭಾರತದಲ್ಲಿಯೇ ತಯಾರಿಸತೊಡಗಿವೆ. ಇಲ್ಲಿಯೂ ಮಾರುಕಟ್ಟೆಯ ಪೈಪೋಟಿ, ಅಗ್ಗದ ಬೆಲೆಗೆ, ಸುಲಭವಾಗಿ ದೊರೆಯುವ, ಎಲ್ಲಿಗೆ ಬೇಕಾದರೂ ಹೊತ್ತೊಯ್ಯಬಲ್ಲ ಯಂತ್ರಮಾದರಿಗಳ ವಿಕಾಸಕ್ಕೆ ದಾರಿಯಾಗಿದೆ. ವೈದ್ಯರು ಈ ಯಂತ್ರಗಳನ್ನು ರೋಗಿಗಳ ಮನೆಗೇ ಹೊತ್ತೊಯ್ದು ಲಿಂಗಪತ್ತೆಯ ಸಲಹೆ ನೀಡತೊಡಗಿದ್ದಾರೆ. ಸುಲಭಕ್ಕೆ ಸಿಗುವ ಸಾಲದ ವ್ಯವಸ್ಥೆಯಿಂದಾಗಿ ಇಂತಹ ಲಿಂಗಪತ್ತೆ ಕೇಂದ್ರಗಳು ಅಣಬೆಗಳಂತೆ ಪುಟಿದೆದ್ದಿವೆ.

ಮುಂದುವರೆದ ಗಂಡು ಹುಟ್ಟಿಸುವ ಸಂಶೋಧನೆ

ಯಾವುದೇ ವಿಜ್ಞಾನ ತಂತ್ರಜ್ಞಾನ ತನ್ನೊಳಗೆ ಅನೇಕ ಸಾಧ್ಯತೆಗಳನ್ನು ಅಡಗಿಸಿಕೊಂಡಿರುತ್ತದೆ. ವಂಶವಾಹಿಯನ್ನು ಕುರಿತಾದ ಸಂಶೋಧನೆ ಆಗಬಹುದು, ಪರಮಾಣುವಿನ ಸಂಶೋಧನೆಯಾಗಬಹುದು. ಅದರ ಉಪಯೋಗ ದುರುಪಯೋಗ ಎರಡರ ಸಾಧ್ಯತೆಯೂ ಗಮನಾರ್ಹವಾದದ್ದು. ಉದಾಹರಣೆಗೆ ಪ್ರನಾಳ ಶಿಶು ಕುರಿತಂತಹ ಸಂಶೋಧನೆಯನ್ನೇ ತೆಗೆದುಕೊಳ್ಳೋಣ. ಪ್ರನಾಳ ಶಿಶು ಗಂಭೀರ ತರಹದ ಅನುವಂಶಿಕ ಕಾಯಿಲೆಗಳನ್ನು ಪ್ರನಾಳ ಸ್ಥಿತಿಯಲ್ಲೆ ಸರಿಪಡಿಸುವ ಸಾಧ್ಯತೆಯಾಗಿ, ಆರೋಗ್ಯಕರ ಸಂತತಿಯ ಉದ್ದೇಶದಿಂದ ಬಂದದ್ದು. ಆದರೆ ಪ್ರನಾಳ ಶಿಶು ತಂತ್ರದ ದುರುಪಯೋಗ ನಡೆಯಿತು. ಇನ್-ವಿಟ್ರೋ ಗರ್ಭದಾನದಿಂದ ಬೇಕಾದ ಲಿಂಗದ ಮಗುವನ್ನು ಆಯ್ದುಕೊಳ್ಳುವ ಸಾಧ್ಯತೆ ಬಂದಿತು. ಭಾರತದಂತಹ ದೇಶಗಳಲ್ಲಿ ಗಂಡು ಮಕ್ಕಳಿಗೆ ನೀಡಿರುವ ಅತಿ ಪ್ರಾಮುಖ್ಯ ಈ ತಂತ್ರದ ನೇರ ದುರುಪಯೋಗಕ್ಕೆ ಕಾರಣವಾಯಿತು.

'ಗಂಡು ಹುಟ್ಟಿಸುವ' ತಂತ್ರಜ್ಞಾನದತ್ತ ಮುಂದುವರೆದ ದೇಶಗಳಲ್ಲಿ ಬಹಳಷ್ಟು ವರ್ಷಗಳಿಂದ ಸಂಶೋಧನೆಗಳು ನಡೆಯುತ್ತಾ ಬಂದಿವೆ. ಇಂದು ಅಮೆರಿಕಾದಲ್ಲಿ 'ಫ್ಲೋ ಸೈಟೋಮೆಟ್ರಿಕ್' ಸಲಕರಣೆಯಲ್ಲಿ 'ಎಕ್ಸ್' ಮತ್ತು 'ವೈ' ವೀರ್ಯಾಣುಗಳನ್ನು ಸಮರ್ಥವಾಗಿ ಬೇರ್ಪಡಿಸಬಹುದಿದೆ. ಈ ತಂತ್ರಜ್ಞಾನದ ಬಗ್ಗೆ ವಿಶೇಷ ಸಂಶೋಧನೆ ಮತ್ತು ಪ್ರಯೋಗಗಳು ನಡೆಯುತ್ತಿವೆ. ಇದರಿಂದ ಬೇಕಾದ ಲಿಂಗದ ಮಗುವನ್ನು ಪಡೆಯುವ ನೇರ ಸಾಧ್ಯತೆ ಇದೆ. 'ಫ್ಲೋ ಸೈಟೋಮೆಟ್ರಿ' ಬಹಳಷ್ಟು ನಿಖರವಾಗಿ ಎಕ್ಸ್ ಮತ್ತು ವೈ ವೀರ್ಯಾಣುಗಳನ್ನು ಬೇರ್ಪಡಿಸುವ ಸಲಕರಣೆಯಾಗಿದೆ. ಈ ತಂತ್ರದಲ್ಲಿ ವೀರ್ಯಾಣುಗಳಿಗೆ ವಿಶೇಷವಾಗಿ ಬಣ್ಣ ಕೊಡುತ್ತಾರೆ. ನಂತರ, ಲೇಸರ್ ಕಿರಣಗಳನ್ನು ಈ ಬಣ್ಣ ಬರಿಸಿದ ವೀರ್ಯಾಣುಗಳ ಮೂಲಕ ಹಾಯಿಸುತ್ತಾರೆ. 'ಎಕ್ಸ್' ವರ್ಣತಂತುವಿರುವ ವೀರ್ಯಾಣು, 'ವೈ' ವೀರ್ಯಾಣುವಿಗಿಂತ ಶೇಕಡ 2.8ರಷ್ಟು ಭಾರವಿರುತ್ತದೆ. ಹಾಗಾಗಿ ಹಾಯ್ದ ಲೇಸರ್ ಕಿರಣ, ಭಾರವಾದ ಎಕ್ಸ್ ವೀರ್ಯಾಣುವನ್ನು ಹಗುರವಾದ 'ವೈ' ವೀರ್ಯಾಣುವಿನಿಂದ ಬೇರ್ಪಡಿಸುತ್ತದೆ. ಅದಾಗಲೆ ಈ ತಂತ್ರವನ್ನು, ಮೊಲ ಮತ್ತು ಅನೇಕ ಪ್ರಾಣಿಗಳ ಮೇಲೆ ಪ್ರಯೋಗ ಮಾಡಿದ್ದಾರೆ. 1995ರಲ್ಲಿಯೇ ಮನುಷ್ಯರ ಮೇಲೆ ಪ್ರಯೋಗ ನಡೆಸಿದ ವರದಿಗಳಿವೆ. ಅಮೆರಿಕದ ಕೃಷಿ ವಿಭಾಗ ಫ್ಲೋ ಸೈಟೋಮೆಟ್ರಿ ವಿಂಗಡಣೆಯ ವಿಧಾನಕ್ಕೆ ಪೇಟೆಂಟ್ ಪಡೆದಿದೆ. ವರ್ಜೀನಿಯಾದ ದಿ ಜೆನೆಟಿಕ್ಸ್ ಅಂಡ್ ಐ.ವಿ.ಎಫ್. ಸಂಸ್ಥೆಗೆ ಈ ತಂತ್ರದ ಸುರಕ್ಷಿತ ಹಾಗೂ ಸಮರ್ಥ ಉಪಯೋಗವನ್ನು ಕುರಿತು ಅಧ್ಯಯನ ಮಾಡಲು ಲೈಸೆನ್ಸ್ ಕೊಟ್ಟಿದೆ. 1998ರಲ್ಲಿ ನಡೆದ ಸಂಶೋಧನೆಯ ಫಲಿತಾಂಶಗಳು ಸ್ತ್ರೀಲಿಂಗ ಆಯ್ಕೆಯಲ್ಲಿ ಈ ತಂತ್ರ, ಶೇಕಡ 92.9ರಷ್ಟು ಯಶಸ್ವಿಯಾಗಿದ್ದನ್ನು, ಪುರುಷಲಿಂಗ ಆಯ್ಕೆಯಲ್ಲಿ ಶೇಕಡ 72ರಷ್ಟು ಯಶಸ್ವಿಯಾದದ್ದನ್ನು ತೋರಿಸಿವೆ. ಹೆಚ್ಚಿನ ಸಂಶೋಧನೆಯ ಹಂತದಲ್ಲಿರುವ ಈ ತಂತ್ರಜ್ಞಾನ, ಈಗ ಪುರುಷಲಿಂಗ ಆಯ್ಕೆಯ ಯಶಸ್ಸನ್ನು ಹೆಚ್ಚಿಸುವತ್ತ ಮುಂದುವರೆದಿದೆ. ವೀರ್ಯಾಣುಗಳನ್ನು ಬಣ್ಣದಲ್ಲಿ ತೋಯಿಸುವುದರಿಂದ ಮತ್ತು ಲೇಸರ್ ಕಿರಣವನ್ನು ಅವುಗಳ ಮೂಲಕ ಹಾಯಿಸುವುದರಿಂದ, ಹುಟ್ಟುವ ಮಕ್ಕಳ ಮೇಲೆ ಯಾವ ಪರಿಣಾಮವಾಗಬಲ್ಲದು ಎಂದು ಇನ್ನೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಬಹಳಷ್ಟು ಮನುಷ್ಯರ ಮೇಲಿನ ಪ್ರಯೋಗಗಳ ನಂತರವಷ್ಟೆ ಇದನ್ನು ಸಾಬೀತು ಮಾಡಲು ಸಾಧ್ಯ.

ಗಮನಿಸಬೇಕಾದದ್ದು, ಅಮೆರಿಕದಂತಹ ದೇಶದಲ್ಲೂ ದಂಪತಿಗಳು ಮೊದಲ ಮಗು ಗಂಡಾಗಲಿ ಎಂದು ಬಯಸುತ್ತಾರೆ. ಬೇಕಾದ ಲಿಂಗದ ಮಗುವನ್ನು ಪಡೆಯುವುದು ತಮ್ಮ ವೈಯಕ್ತಿಕ ಆಯ್ಕೆ ಮತ್ತು ಹಕ್ಕು ಎಂದು ತಿಳಿಯುತ್ತಾರೆ. ವೈಯಕ್ತಿಕ ಆಯ್ಕೆ, ಸಾರ್ವತ್ರಿಕ ಒಳಿತಿಗೆ ವಿರುದ್ಧವಿದ್ದಾಗ ಅದಕ್ಕೆ ಖಂಡಿತಾ ಅವಕಾಶವಿರಬಾರದು. ಯಾವ ಸಮಾಜದಲ್ಲಿ ಗಂಡು ಹೆಣ್ಣಿನ ನಡುವೆ ಸಮಾನತೆ ಇದೆಯೋ, ಯಾವ ಸಂಸ್ಕೃತಿಯಲ್ಲಿ ಒಂದು ಲಿಂಗದ ಮಗುವಿಗೆ ವಿಪರೀತದ ಪ್ರಾಮುಖ್ಯವಿಲ್ಲವೋ, ಅಂತಹ

ಸಮಾಜದಲ್ಲಿ ಇಂತಹ ತಂತ್ರಜ್ಞಾನಗಳು ಮಾರಕವಾಗದೆ ಉಳಿಯಬಲ್ಲವು. ಅಂತಹ ಸಮಾಜದಲ್ಲಿ, ಈ ಬಗೆಯ ಗರ್ಭಧಾರಣೆಗೆ ಮೊದಲೇ ಭ್ರೂಣ-ಲಿಂಗ ಆಯ್ಕೆಯ ಅವಕಾಶ, ದಂಪತಿಗಳಿಗೆ ತಮ್ಮ ಕುಟುಂಬದೊಳಗೆ ಲಿಂಗ ವೈವಿಧ್ಯತೆಯನ್ನು ಉಳಿಸಿಕೊಳ್ಳುವ ಸಾಧ್ಯತೆಯನ್ನು ನೀಡಬಲ್ಲುದು. ಉದಾಹರಣೆಗೆ ಮೊದಲನೆಯ ಮಗು ಗಂಡಾಗಿದ್ದರೆ, ದಂಪತಿಗಳು ಈ ತಂತ್ರವನ್ನು ಬಳಸಿ, ಎರಡನೆಯದನ್ನು ಹೆಣ್ಣಾಗಿ ಮಾಡಿಕೊಳ್ಳಬಲ್ಲರು. ಹಾಗೆಯೇ ಮೊದಲನೆಯದು ಹೆಣ್ಣಾಗಿದ್ದರೆ, ಎರಡನೆಯದನ್ನು ಗಂಡಾಗಿ ಪಡೆಯಬಲ್ಲರು.

ಆದರೆ ಭಾರತದಂತಹ ಸಮಾಜದಲ್ಲಿ ಲಿಂಗ ತಾರತಮ್ಯ ವಿಪರೀತವಿರುವಾಗ, ಗಂಡು ಮಗುವಿನ ತೀವ್ರ ಮೋಹ, ಗಂಡಿಗಿರುವ ಆಸ್ತಿಹಕ್ಕು, ವರದಕ್ಷಿಣೆಯ ಆಮಿಷ, ಗಂಡು ಮಗುವಿನಿಂದಲೇ ಪಿಂಡ ಪ್ರಧಾನವಾಗಿ ತಮಗೆ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂಬ ನಂಬಿಕೆ - ಇವೆಲ್ಲವೂ ಇಂತಹ ತಂತಜ್ಞಾನ ನಮ್ಮ ದೇಶಕ್ಕೆ ಪ್ರವೇಶ ಪಡೆದರೆ, ಬಲು ಅಪಾಯಕಾರಿ ಎಂದು ಸ್ಪಷ್ಟ ಪಡಿಸುತ್ತವೆ. ಯಾರು ಈ ತಂತ್ರವನ್ನು ಬಳಸಿ ಮಕ್ಕಳನ್ನು ಮಾಡಿಕೊಂಡರು ? ಯಾರಿಲ್ಲ ? ಎಂಬುದು ಕೂಡಾ ತಿಳಿಯುವುದಿಲ್ಲ. ಇಂದೇನೋ, ಭ್ರೂಣ ಲಿಂಗಪತ್ತೆ ತದನಂತರದ ಗರ್ಭಪಾತದ ರೇಜಿಗೆ, ಇವುಗಳು ಉಳಿಸುವ ಪುರಾವೆಗಳಿಂದ ಅಪರಾಧದ ಪತ್ತೆ ಸಾಧ್ಯವಾಗುತ್ತಿದೆ. ಏನೊಂದೂ ಸೂಚನೆ, ಪುರಾವೆ ಉಳಿಸದೆ, ಫಲಿಸುವ ಮೊದಲೆ, ಗರ್ಭ ಧರಿಸುವ ಮೊದಲೆ, ಹೆಣ್ಣನ್ನು ಇಲ್ಲವಾಗಿಸುವ ಹೊಸ ತಂತ್ರ ಭಾರತದ ಮಟ್ಟಿಗೆ ಬಲು ಅಪಾಯಕಾರಿ. ಅಮೆರಿಕದಲ್ಲಿ ಬಲು ಬೇಗನೆ ಜನಸಾಮಾನ್ಯರ ಕೈಗೆ ಎಟುಕಲಿರುವ ತಂತ್ರಜ್ಞಾನವಿದು. ಮುಂದಾಲೋಚನೆ ಇಲ್ಲದೆ ಈ ತಂತ್ರವನ್ನು ಯಾವ ನಿರ್ಬಂಧವಿಲ್ಲದೆ ಆಮದು ಮಾಡಿಕೊಂಡರೆ, ಬಹುರಾಷ್ಟ್ರೀಯ ಕಂಪನಿಗಳು 'ಆಲ್ಟ್ರಾ ಸೌಂಡ್' ಯಂತ್ರಗಳಂತೆಯೇ, ಫ್ಲೋ ಸೈಟೋಮೆಟ್ರಿಕ್ ಯಂತ್ರಗಳನ್ನು ಭಾರತಕ್ಕೆ ತಂದು ತುಂಬುವ ಕಾಲ ದೂರವಿರುವುದಿಲ್ಲ. ಇತ್ತೀಚಿನ ಕ್ಲೋನಿಂಗ್ ಪ್ರಯೋಗಗಳು, ಬರೀ ಗಂಡು ಮಕ್ಕಳ ಕ್ಲೋನಿಂಗ್‌ಗೆ ಮುಂದೊಂದು ದಿನ ಮುಟ್ಟಿನಿಂತರೆ ಆಚ್ಚರಿ ಪಡಬೇಕಿಲ್ಲ.

ಲಿಂಗ ಪ್ರಮಾಣದಲ್ಲಿ ಅಸಮತೋಲನ

ಜಗತ್ತಿನಾದ್ಯಂತ ಲಿಂಗ ಪ್ರಮಾಣವನ್ನು ಹೋಲಿಸಿ ನೋಡಿದರೆ, ದೇಶ ದೇಶಗಳ ನಡುವೆ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಒಂದೇ ದೇಶದಲ್ಲಿ ಬೇರೆ ಬೇರೆ ಭಾಗಗಳಲ್ಲಿಯೂ ವ್ಯತ್ಯಾಸಗಳು ಕಾಣುತ್ತೇವೆ. ಆಯಾ ದೇಶಗಳ, ಭಾಗಗಳ, ಹೆಣ್ಣು-ಗಂಡುಗಳ ಪ್ರಮಾಣ, ಆಯಾ ತಾಣದ ಸ್ತ್ರೀ-ಪುರುಷ ಸಮಾನತೆಯ ಮಾಪಕದಂತಿದೆ. ಅಂದರೆ, ಆಯಾ ನೆಲದ ಹೆಣ್ಣು ಮಕ್ಕಳ ಸಂಖ್ಯೆಗೂ, ಅಲ್ಲಿಯ ಲಿಂಗ ನೀತಿಗೂ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯತ್ಯಾಸಗಳಿಗೂ, ನೇರ ಸಂಬಂಧವಿದೆ.

1901ರಲ್ಲಿ ಭಾರತದಲ್ಲಿ ಪ್ರತಿ ಸಾವಿರ ಗಂಡಸರಿಗೆ 972 ಹೆಂಗಸರಿದ್ದರು. ಇದೇ ಸಂಖ್ಯೆ 1971ರಲ್ಲಿ 930ಕ್ಕೆ ಇಳಿದು ಹೋಯಿತು. 1981ರಲ್ಲಿ ಸ್ವಲ್ಪ ಮೇಲೇರಿ 936ಕ್ಕೆ ತಲುಪಿದ್ದರೆ, ಭ್ರೂಣಲಿಂಗ ಮತ್ತೆ ಕ್ಲಿನಿಕಗಳ ಹಾವಳಿ, 1991ರ ಹೊತ್ತಿಗೆ ಈ ಸಂಖ್ಯೆಯನ್ನು 929ಕ್ಕೆ ಜಗ್ಗಿತು.

ಕೆಳಗಿನ ಟೇಬಲ್ ನೋಡಿ, ಮೂರನೆ ಜಗತ್ತಿನ ಹತ್ತು ರಾಷ್ಟ್ರಗಳಲ್ಲಿ ಹೆಣ್ಣು ಮಕ್ಕಳ ಸಾವಿನ ಸಂಖ್ಯೆಯನ್ನು ಇದು ನಮೂದಿಸುತ್ತದೆ.

ಸತ್ತ ಪ್ರತಿ ನೂರು ಗಂಡು ಮಕ್ಕಳಿಗೆ, ಸತ್ತ ಹೆಣ್ಣು ಮಕ್ಕಳ ಸಂಖ್ಯೆ (1986):

ದೇಶ	ಒಂದು ವರ್ಷಕ್ಕಿಂತ ಕೆಳಗಿನ ಹೆಣ್ಣು ಮಕ್ಕಳು	ಒಂದರಿಂದ ನಾಲ್ಕರವರೆಗಿನ ಹೆಣ್ಣು ಮಕ್ಕಳು
ಭಾರತ	109	300
ಬಾಂಗ್ಲಾದೇಶ	93	112
ಈಜಿಪ್ಟ್	100	122
ನೇಪಾಲ್	97	110
ಪೆರು	89	102
ಪಾಕಿಸ್ತಾನ	89	126
ದಕ್ಷಿಣ ಕೊರಿಯ	86	105
ಈಕ್ವೇಡರ್	89	105

ಮೇಲಿನ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ, ಆರ್ಥಿಕವಾಗಿ ಪ್ರಬಲವಾಗುತ್ತಿರುವ ಭಾರತದಂತಹ ದೇಶದಲ್ಲಿ, ಸತ್ತ ಪ್ರತಿ ನೂರು ಗಂಡು ಮಕ್ಕಳಿಗೆ, ಮೂನ್ನೂರರಷ್ಟು ಹೆಣ್ಣು ಮಕ್ಕಳು ಸಾಯುತ್ತಿವೆ ಎಂಬ ನಾಚಿಗೇಡಿನ ಸತ್ಯ ಎದ್ದು ಕಾಣುತ್ತದೆ. ಬಗಲಿನ ಬಡತನದ ಬಾಂಗ್ಲಾದೇಶ, ಪಾಕಿಸ್ತಾನಗಳಲ್ಲಿ ಇವೇ ಸಂಖ್ಯೆಯನ್ನು ಗಮನಿಸಿ. ಬಾಂಗ್ಲಾದೇಶದಲ್ಲಿ ಸತ್ತ ಪ್ರತಿ ನೂರು ಗಂಡು ಮಕ್ಕಳ ಸಂಖ್ಯೆಗೆ, ಸತ್ತ ಹೆಣ್ಣು ಮಕ್ಕಳ ಸಂಖ್ಯೆ 112 ಮಾತ್ರ. ಪಾಕಿಸ್ತಾನದಲ್ಲಿ ಈ ಸಂಖ್ಯೆ 126. ಈ ಪ್ರಮಾಣಗಳು ಅಷ್ಟೊಂದು ಆಘಾತಕಾರಿಯಾಗಿಲ್ಲ. ಆದರೆ ಭಾರತದಲ್ಲಿ 300ರಷ್ಟು ಅತ್ಯಧಿಕ ಸಂಖ್ಯೆಯ ಹೆಣ್ಣು ಮಕ್ಕಳ ಸಾವಿಗೆ ಕಾರಣವೇನು ? ಪಿತೃಪ್ರಧಾನತೆ,

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಸ್ತ್ರೀಯರ ಶೋಷಣೆ, ಅಸಮಾನತೆ, ನಮ್ಮ ದೇಶದಲ್ಲಿ ಹೆಚ್ಚಿದೆಯೆ ? ಸುಲಭವಾಗಿ ದೊರಕುತ್ತಿರುವ ಲಿಂಗಪತ್ತೆಯ ತಂತ್ರಜ್ಞಾನ ಅದಾಗಲೆ ಹುಟ್ಟುವ ಹೆಣ್ಣು ಮಕ್ಕಳ ಸಂಖ್ಯೆಯನ್ನೇ ಇಳಿಮುಖವಾಗಿಸಿರುವಾಗ, ಹುಟ್ಟಿದ ಮೇಲೂ ಹೆಣ್ಣು ಮಕ್ಕಳು ಇಷ್ಟು ಸಂಖ್ಯೆಯಲ್ಲಿ ಏಕೆ ಸಾಯುತ್ತಿದ್ದಾರೆ ?

ಪೆರು, ಈಕ್ವೇಡರನಂತಹ ಬಡ ದೇಶಗಳಲ್ಲಿ ಪ್ರಜಾಪ್ರಭುತ್ವವಿನ್ನೂ ಗಟ್ಟಿಯಾಗಿ ನೆಲೆಯೂರದೆ ಯಾದವೀ ಕಲಹಗಳಲ್ಲಿ ತೊಳಲಾಡಿ ಮೇಲೆದ್ದ ದೇಶಗಳಲ್ಲೂ, ಲಿಂಗ ತಾರತಮ್ಯತೆ ಬಹುಶಃ ಭಾರತದಷ್ಟು ಹೆಚ್ಚಿಲ್ಲ ಎನಿಸುತ್ತದೆ. ಅಲ್ಲಿಯ ಹೆಣ್ಣು ಮಕ್ಕಳ ಸಾವಿನ ಸಂಖ್ಯೆ, ಹೆಚ್ಚು ಕಡಮೆ ಗಂಡು ಮಕ್ಕಳಷ್ಟೇ ಇರುವುದರಿಂದ ನಾವು ಗಮನಿಸಬೇಕು.

ಇವೆಲ್ಲವೂ ನಮ್ಮ ಸಮಾಜದಲ್ಲಿಯ ಮೂಲಭೂತ ಕೊರತೆಯತ್ತ ನಮ್ಮ ಕಣ್ಣನ್ನು ತೆರೆಸಬೇಕಿದೆ. ಹುಟ್ಟಿದ ಹೆಣ್ಣು ಮಕ್ಕಳು ಬಾಲ್ಯಾವಸ್ಥೆಯಲ್ಲಿ ಏಕೆ ಇಷ್ಟು ಸಂಖ್ಯೆಯಲ್ಲಿ ಸಾಯುತ್ತಿವೆ ಎಂಬತ್ತ ಗಮನ ಹರಿಯಬೇಕಿದೆ. ಒಂದು, ಹೆಣ್ಣು ಶಿಶು ಹತ್ಯೆ ಯಥೇಚ್ಛವಾಗಿ ನಡೆಯುತ್ತಿದೆ, ಮತ್ತೊಂದು ಹೆಣ್ಣು ಮಕ್ಕಳಿಗೆ ಆಹಾರದ ಕೊರತೆಯಿದೆ, ಅವರ ಆರೋಗ್ಯದತ್ತ ನಿರ್ಲಕ್ಷ್ಯವಿದೆ.

ತಂತ್ರಜ್ಞಾನದ ದುರುಪಯೋಗದ ತಡೆ ಬಲು ಸಂಕೀರ್ಣವಾಗಿದೆ. ಕಾನುನುಗಳು ಅಗತ್ಯವಾದರೂ, ಕೇವಲ ಕಾನೂನುಗಳು ದುರುಪಯೋಗವನ್ನು ನಿಲ್ಲಿಸಲಾರವು. ಮತ್ತಷ್ಟು ಹೊಸ ಹೊಸ ತಂತ್ರಜ್ಞಾನಗಳು ಬಂದಂತೆ, ಅವುಗಳನ್ನು ನಿಯಂತ್ರಿಸುವುದು, ಕಾನೂನಿನ ಅಡಿಗೆ ತರುವುದು ಮತ್ತಷ್ಟು ಕಷ್ಟವಾಗುತ್ತಿದೆ. ಒಟ್ಟು ಸಮುದಾಯದ ಚಿಂತನೆಯಲ್ಲಿ ಬದಲಾವಣೆಯಾಗಬೇಕು. ಸ್ತ್ರೀಯರ ಸ್ಥಾನಮಾನದಲ್ಲಿ ಗಮನಾರ್ಹ ಸುಧಾರಣೆಯಾಗಬೇಕು. ಹೆಣ್ಣು ಮಗುವಿಗೆ ಆಸ್ತಿಯ ಹಕ್ಕು ದೊರೆಯಬೇಕು. ಹೆಣ್ಣು ಮಗು ಬೇಕು ಎನ್ನುವಂತಹ ಪರಿಸರ ಸೃಷ್ಟಿಯಾಗಬೇಕು. ಅಂತಹ ಪರಿಸರದಲ್ಲಿ ಲಿಂಗಭೇದದ ತಂತ್ರಜ್ಞಾನ ನಿರುಪಯೋಗವಾಗಿ, ಯಾರೂ ಬಳಸದಂತಹ ವಾತಾವವಣ ಮೂಡಬಲ್ಲದು. ಹೆಣ್ಣು ಮಕ್ಕಳ ನಿರ್ಲಕ್ಷದತ್ತ ಗಮನ ಸೆಳೆದು ಲಿಂಗ ಸಮಾನತೆಯತ್ತ ಹೆಜ್ಜೆ ಹಾಕುವ ಕ್ರಮಗಳು ಮಾತ್ರ ಈ ಪಿಡುಗಿಗೆ ಶಾಶ್ವತ ಪರಿಹಾರವನ್ನು ಒದಗಿಸಬಲ್ಲವು.

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri